ವಿಜಯಪುರ | ಸಂಪುಟ 01 | ಸಂಚಿಕೆ 267 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಭಾನುವಾರ ಡಿಸೆಂಬರ್ 17, 2023

"ಮುಂಬರುವ ಬೇಸಿಗೆಗೆ ಸಿಂದಗಿ ಮತಕ್ಷೇತ್ರದ ಜನತೆಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಧಿಕಾರಿಗಳು ಹೆಚ್ಚು ಕಾಳಜಿ ವಹಿಸಬೇಕು. ಅದಕ್ಕೆ ಬೇಕಾಗಿರುವ ಅನುದಾನ ಮತ್ತು ಇನ್ನಿತರ ವ್ಯವಸ್ಥೆ ಒದಗಿಸಲು ನಾನು ಸಿದ್ಧ.




– ಅಶೋಕ ಮನಗೂಳಿ
ಶಾಸಕರು, ಸಿಂದಗಿ ಮತಕ್ಷೇತ್ರ

### ರಾಜ್ಯಸಭೆಯಲ್ಲಿ ಕಾಂಗ್ರೆಸ್ ವಿರುದ್ಧ ಅಮಿತ್ ಶಾ ವಾಗ್ದಾಳಿ | ಪಾಕ್ ಆಕ್ರಮಿತ ಕಾಶ್ಮೀರ ಭಾರತಕ್ಕೆ ಸೇರಿದ್ದೆಂದು ಸ್ಪಷ್ಟನೆ

# ನಮ್ಮಿಂದ ಯಾರೂ ಪಿಓಕೆ ಕಸಿದುಕೊಳ್ಳಲು ಸಾಧ್ಯವಿಲ್ಲ!

ನವದೆಹಲಿ: 370ನೇ ವಿಧಿ ಕುರಿತು ಸುಪ್ರೀಂ ಕೋರ್ಟ್‌ನ ತೀರ್ಪಿನ ನಂತರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯಸಭೆಯಲ್ಲಿ ಈ ಬಗ್ಗೆ ಮಾತನಾಡಿದ್ದು ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಪಾಕ್ ಆಕ್ರಮಿತ ಕಾಶ್ಮೀರದಲ್ಲಿ 24 ಸ್ಥಾನಗಳನ್ನು ಕಾಯ್ದಿರಿಸಲಾಗಿದೆ ಎಂದು ಅಮಿತ್ ಶಾ ಹೇಳಿದ್ದಾರೆ. ಪಾಕ್ ಆಕ್ರಮಿತ ಕಾಶ್ಮೀರ ಭಾರತಕ್ಕೆ ಸೇರಿದ್ದು, ಅದು ನಮ್ಮದು, ಅದನ್ನು ನಮ್ಮಿಂದ ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ಮತ್ತೊಮ್ಮೆ ಹೇಳುತ್ತಿದ್ದೇನೆ ಎಂದರು.

ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ಅವರು ಆರ್ಟಿಕಲ್ 370 ರ ತೀರ್ಪು ನೀಡುವಾಗ ಜಮ್ಮು ಮತ್ತು ಕಾಶ್ಮೀರವು ಭಾರತದೊಂದಿಗೆ ವಿಲೀನಗೊಂಡ ನಂತರ ಆಂತರಿಕ ಸಾರ್ವಭೌಮತ್ವದ ಹಕ್ಕನ್ನು ಹೊಂದಿಲ್ಲ ಎಂದು ಹೇಳಿದ್ದರು. ಆರ್ಟಿಕಲ್ 370 ತಾತ್ಕಾಲಿಕ ನಿಬಂಧನೆಯಾಗಿದೆ ಎಂದು ಅಮಿತ್ ಶಾ ಹೇಳಿದರು.

ಕಾಶ್ಮೀರದ ವಿಲೀನಕ್ಕೆ ಜವಾಹರಲಾಲ್ ನೆಹರು ಹೊಣೆಗಾರ ಎಂದು ಅಮಿತ್ ಶಾ ಹೇಳಿದರು. ನೆಹರೂ ಕಾಶ್ಮೀರವನ್ನು ಅರ್ಧದಷ್ಟು ಬಿಟ್ಟು ಹೋದರು. ಅಕಾಲಿಕ ಕದನ



ವಿರಾಮ ಇಲ್ಲದಿದ್ದರೆ ಇಂದು ಪಾಕ್ ಆಕ್ರಮಿತ ಕಾಶ್ಮೀರ ಇರುತ್ತಿರಲಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ ಎಂದು ಕೇಂದ್ರ ಗೃಹ ಸಚಿವರು ಹೇಳಿದರು.

ಜಮ್ಮು ಮತ್ತು ಕಾಶ್ಮೀರ ಮೀಸಲಾತಿ (ತಿದ್ದುಪಡಿ) ಮಸೂದೆ, 2023 ಮತ್ತು ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ (ತಿದ್ದುಪಡಿ) ಮಸೂದೆ, 2023 ಅನ್ನು ರಾಜ್ಯಸಭೆಯಲ್ಲಿ ಅಂಗೀಕರಿಸಲಾಗಿದೆ. ಎರಡೂ ವಿಧೇಯಕಗಳನ್ನು ಕಳೆದ ವಾರ ಲೋಕಸಭೆ ಅಂಗೀಕರಿಸಿತ್ತು.

ಜಮ್ಮು ಮತ್ತು ಕಾಶ್ಮೀರ ಮೀಸಲಾತಿ (ತಿದ್ದುಪಡಿ) ಮಸೂದೆ, 2023 ಮತ್ತು ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ (ತಿದ್ದುಪಡಿ) ಮಸೂದೆ, 2023 ಕುರಿತು ರಾಜ್ಯಸಭೆಯಲ್ಲಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಈ ಹಿಂದೆ ಜಮ್ಮುವಿನಲ್ಲಿ 37 ಸ್ಥಾನಗಳಿದ್ದವು. ಈಗ ಹೊಸ ಡಿಲಿಮಿಟೇಶನ್ ಆಯೋಗದ ನಂತರ 43 ಸ್ಥಾನಗಳಿವೆ. ಮೊದಲು ಕಾಶ್ಮೀರದಲ್ಲಿ 46 ಸ್ಥಾನಗಳಿದ್ದರೆ, ಈಗ 47 ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ 24 ಸ್ಥಾನಗಳನ್ನು ಕಾಯ್ದಿರಿಸಲಾಗಿದೆ. ಏಕೆಂದರೆ ಪಿಓಕೆ ನಮ್ಮದು. ಇಂದು 370ನೇ ವಿಧಿ ಕುರಿತು ಸುಪ್ರೀಂ ಕೋರ್ಟ್‌ನ ತೀರ್ಪು ಕೂಡ ಬಂದಿದೆ ಎಂದರು.

ಅದೇನೇ ಇದ್ದರೂ, ಕಾಂಗ್ರೆಸ್ ಇದನ್ನು ಒಪ್ಪುವುದಿಲ್ಲ ಮತ್ತು 370ನೇ ವಿಧಿಯನ್ನು ತಪ್ಪಾಗಿ ತೆಗೆದುಹಾಕಲಾಗಿದೆ ಎಂದೇ ನಂಬುತ್ತದೆ ಎಂದು ಹೇಳಿದರು.


### ರಾಜ್ಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘದ ಸಮ್ಮೇಳನ ಉದ್ಘಾಟಿಸಿದ ಸಚಿವ ಎಂ.ಬಿ.ಪಾಟೀಲ ಅಭಿಮತ

# ಮಹಿಳೆ ಕುಟುಂಬ ಮತ್ತು ದೇಶದ ಆಧಾರ ಸ್ತಂಭ

**ರಾಜ ನುಡಿ**

ಹಿಂದೆ ಯಾರೋ ಮಾಡಿದ ಆಸ್ತಿಗೆ, ಇಂದಿನವರು ಆಸೆ ಪಟ್ಟಾಗಲೆಲ್ಲ ಮಹಾಭಾರತ ರಾಮಾಯಣಗಳು ಘಟಿಸಿದವು. ಯಾರಿಂದಲೂ ಏನನ್ನೂ ನಿರೀಕ್ಷಿಸದೆ ಮಳೆ ಮತ್ತು ಇಳೆಯನ್ನು ನಂಬಿ ಬದುಕುವ ಸಾಮಾನ್ಯ ರೈತ ನಮಗೆ ಯಾವ ಗ್ರಂಥಗಳೂ ಕಲಿಸದ ನೆಮ್ಮದಿಯ ಪಾಠ ಕಲಿಸಬಲ್ಲ..

-ಡಾ. ರಾಜಶೇಖರ ನಾಗೂರ



**ವಚನ ಚಿಂತನ 257**

*ಅಂಗದ ಹೊಲಬನರಿದಲ್ಲದೆ ಲಿಂಗದ ನೆಲೆಯನರಿಯಬಾರದು*

*ಅಂಗದ ಹೊಲಬನರಿದಲ್ಲದೆ ಲಿಂಗದ ನೆಲೆಯನರಿಯಬಾರದು*
*ಲಿಂಗದ ನೆಲೆಯನರಿದಲ್ಲದೆ ನಿಜನಿರ್ಣಯವ ತಿಳಿಯಬಾರದು*
*ನಿಜನಿರ್ಣಯವ ತಿಳಿದಲ್ಲದೆ ತನ್ನ ತಾನ-ರಿಯಬಾರದು*
*ಗುರುಕರುಣದಿಂದ ತನ್ನ ತಾನರಿದ ಶರಣಂಗೆ*
*ಅಂಗಕ್ಕೆ ಆಚಾರವಿಲ್ಲ,ಲಿಂಗಕ್ಕೆ ಕುರುಹಿಲ್ಲ*
*ಗುರುಬಸವೇಶನೆಂಬುದಕ್ಕೆ ಕುರುಹುಮುನ್ನಿಲ್ಲ*
*---ಗುರುಬಸವೇಶ್ವರ*

ಅಂಗದ ಹೊಲಬ, ನೆಲೆ, ನಿರ್ಣಯನ-ರಿಯುವುದೆಂದರೆ ತನ್ನತಾನಾರೆಂಬುದ ಅರಿಯುವುದಾಗಿದೆ, ಲಿಂಗದ ನೆಲೆಯನ-ರಿಯಬಾರದು ಎಂದರೆ ಲಿಂಗದ ನೆಲೆಯು ಅರುವಿಗೆ ಬರುವುದಿಲ್ಲ ಎಂದರ್ಥ. ಅಂದರೆ ಅಂಗದೊಳಗೆ (ಮಹಾ)ಲಿಂಗದವು ಪ್ರಾಣಲಿಂಗದ ರೂಪದಲ್ಲಿ ಅಡಗಿದೆ. ಅಂಗವನ್ನು ಅರಿಯುವುದೆಂದರೆ ಲಿಂಗವನ್ನು ಅರಿಯುವುದಾಗಿದೆ. ಲಿಂಗದ ನೆಲೆ(ಇರುವಿಕೆ) ಅರಿತರೆ ಏನುಮಾಡಬೇಕೆಂಬುದು ಅರ್ಥ-ವಾಗುತ್ತದೆ, (ಲಿಂಗದ ನೆಲೆಯನರಿದಲ್ಲದೆ ನಿಜನಿರ್ಣಯವ ತಿಳಿಯಲು ಬಾರದು) ಇದನ್ನು ಸಾಧಿಸಬೆಕೆಂದರೆ ಗುರುಕರುಣೆ ಅವಶ್ಯಕತೆ ಇದೆ (ಗುರುಕರುಣದಿಂದ ತನ್ನ ತಾನರಿದ ಶರಣಂಗೆ) ಎಂದು ತಿಳಿಸಿರುವುದು ಗಮನಿಸುವಂತಿದೆ. ಹಾಗೂ ವಚನದಲ್ಲಿ ಗಮನಸೆಳೆಯುವ ಮತ್ತೊಂದು ಪ್ರಮುಖ ಅಂಶವೆಂದರೆ ಲಿಂಗಕ್ಕೆ ಕುರುಹಿಲ್ಲ ಎಂದಿರುವುದು, ಲಿಂಗವೆನ್ನುವುದು ಅಗಮ್ಯ ಅಗೋಚರ ಅಪ್ರತಿಮ ಅನಂತ ಎಂಬ ಬಸವಣ್ಣನವರ ಜಗದಗಲ ಮುಗಿಲಗಲ ವ್ಯಾಪ್ತಿಯನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಅದರ ವ್ಯಾಪಕತೆಯನ್ನು ಅರಿತು ಬೆರೆಯುವುದೇ ಶರಣನ ಐಕ್ಯಸ್ಥಿತಿಯ ಹಂತ. ಅದು ಲಿಂಗಪೂಜೆಯ ಅಂತಿಮ ಗುರಿಯು ಆಗಿದೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕುಟುಂಬ ಮತ್ತು ದೇಶಕ್ಕೆ ಆಧಾರ ಸ್ತಂಭವಾಗಿ ಸಮಾಜಕ್ಕೆ ಬೆನ್ನೆಲುಬಾಗಿರುವ ಮಹಿಳೆಯರನ್ನು ಸದಾ ಸದೃಢ ಮತ್ತು ಆರೋಗ್ಯವಂತವಾಗಿಡಲು ನಾವೆಲ್ಲರೂ ಪಣತೊಡೋಣ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ನಗರದ ಬಿ. ಎಲ್. ಡಿ. ಈ ವೈದ್ಯಕೀಯ ಕಾಲೇಜಿನ ಗ್ರಂಥ-ಾಲಯದಲ್ಲಿ ಶುಕ್ರವಾರ ಮುಸ್ಸಂಜೆ ನಡೆದ ಕರ್ನಾಟಕ ರಾಜ್ಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘದ 38ನೇ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು ವಿಶ್ವದಲ್ಲಿ ಭೂಮಿ ತಾಯಿಯಂತೆ ಪ್ರಮುಖ ಪಾತ್ರ ವಹಿಸುತ್ತಾರೆ. ಮಹಿಳೆಗೆ ಮಾತ್ರ ಮತ್ತೊಂದು ಜೀವ ಸೃಷ್ಠಿ ಸಾಮರ್ಥ್ಯವಿದೆ. ದೇವರು ಜೀವಸೃಷ್ಠಿಗೆ ಮಹಿಳೆಯನ್ನು ಸೃಷ್ಠಿಸಿದ್ದಾರೆ. ಹೀಗಾಗಿ ಹೆರಿಗೆ ಸಂದರ್ಭದಲ್ಲಿ ಮಹಿಳೆಯರ ಸಾವು ಮತ್ತು ಭ್ರೂಣ ಹತ್ಯೆ ತಡೆಯುವ ನಿಟ್ಟಿನಲ್ಲಿ ಎಲ್ಲರೂ ಗಮನ ಹ-ರಿಸಬೇಕಿದೆ. ಆರೋಗ್ಯವಂತ ಮಹಿಳೆ ತನ್ನ ಕುಟುಂಬವನ್ನು ಸುಖವಾಗಿ ಇಡಬಲ್ಲಳು. ಜೊತೆಗೆ ಸದೃಢ ರಾಷ್ಟ್ರವನ್ನು ನಿರ್ಮಿಸಬಲ್ಲಳು. ಹೀಗಾಗಿ ಸ್ತ್ರೀರೋಗ ಶಾಸ್ತ್ರದಲ್ಲಿ ಆಗುತ್ತಿರುವ ಆಧುನಿಕ ಬದಲಾವಣೆಗಳಿಗೆ ತಕ್ಕಂತೆ ಜ್ಞಾನ ಸಂಪಾದಿಸಿ ವೃತ್ತಿಕೌಶಲ್ಯ ಬೆಳೆಸಿಕೊಳ್ಳಬೇಕು. ಎಲ್ಲ ಕ್ಷೇತ್ರಗಳ ಮೇಲೆ ಪ್ರಭಾವ ಬೀರುತ್ತಿರುವ ಕೃತಕ ಬುದ್ಧಿಮತ್ತೆಯನ್ನು ಸಮರ್ಪಕವಾಗಿ ಬಳಸಿಕೊಂಡು ಆನಾರೋಗ್ಯದ ಲಕ್ಷಣಗಳನ್ನು ಆರಂಭ ಹಂತದಲ್ಲಿಯೇ ಪತ್ತೆ ಮಾಡಿ ಶಿಶು ಮರಣ ಪ್ರಮಾಣವನ್ನು ತಡೆಯಲು ಸೂಕ್ತ ಚಿಕಿತ್ಸೆ ಒದಗಿಸಬೇಕು ಎಂದು ಅವರು ಹೇಳಿದರು.

ವಿಶ್ವಾದ್ಯಂತ ಕೇವಲ ಶೇ. 33 ರಷ್ಟು ರಾಷ್ಟ್ರಗಳು ಮಾತ್ರ ಮಹಿಳಾ



ಕಾನೂನುಗಳನ್ನು ಅನುಷ್ಠಾನಕ್ಕೆ ತಂದಿವೆ. ಮಹಿಳೆಯರ ಹಕ್ಕುಗಳನ್ನು ರಕ್ಷಿಸದಿದ್ದರೆ ಮಹಿಳಾ ಆರೋಗ್ಯ ವ್ಯವಸ್ಥೆಗೆ ಬಲವಾದ ಪೆಟ್ಟು ಬೀಳಲಿದೆ. ಮಹಿಳೆಯರು ಸ್ವಾಭಿಮಾನ ಮತ್ತು ಘನತೆಯೊಂದಿಗೆ ಸ್ವತಂತ್ರ ಜೀವನವನ್ನು ನಡೆಸಲು ಅವಳಿಗೆ ಅಧಿಕಾರ ನೀಡಿ ಘನತೆಯಿಂದ ಜೀವನ ನಡೆಸಲು ಪ್ರೋತ್ಸಾಹಿಸಬೇಕು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿಜಯಪುರ- ಗದಗ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಶ್ರೀ ನಿರ್ಭಯಾನಂದ ಸರಸ್ವತಿ ಸ್ವಾಮೀಜಿ, ಬಿ. ಎಲ್.ಡಿ.ಇ ಸಂಸ್ಥೆ ಕರ್ನಾಟಕದ ಹೆಮ್ಮೆ. ಸಚಿವ ಎಂ. ಬಿ. ಪಾಟೀಲರು ದೂರದೃಷ್ಠಿ ಹೊಂದಿರುವ ನಾಯಕರು. ಕಂಡ ಕನಸು ನನಸು ಮಾಡುತ್ತಾರೆ. ಹಿಡಿದ ಛಲ ಪೂರ್ಣವಾಗುವವರೆಗೆ ವಿರಮಿಸುವುದಿಲ್ಲ. ಅವರಿಂದಾಗಿ ಜಿಲ್ಲೆ ಗಣನೀಯವಾಗಿ ಅಭಿವೃದ್ಧಿತಾಗುತ್ತಿದೆ ಎಂದು ಶ್ರೀ ನಿರ್ಭಯಾನಂದ ಸ್ವಾಮಿಜಿ ಸಂತಸ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘದಸಂಘದ ಮುಖ್ಯ ಪೋಷಕ ಡಾ. ಎಂ. ಜಿ. ಹಿರೇಮಠ ಮಾತನಾಡಿ, ರಾಜ್ಯದಲ್ಲಿ 4000 ಸಂಘದ ಸದಸ್ಯರಿದ್ದಾರೆ. ವಿಜಯಪುರವನ್ನು ಎಂ. ಬಿ. ಪಾಟೀಲ ಅವರು ಗಣನೀಯವಾಗಿ ಅಭಿವೃದ್ಧಿ ಪಡಿಸಿದ್ದಾರೆ. ಅವರು ಜಲಸಂಪನ್ಮೂಲ ಸಚಿವಾರಿಗ ಕೈಗೊಂಡಿರುವ ಕ್ರಮಗಳಿಂದಾಗಿ ಇಲ್ಲಿನ ಪರಿಸರದ ವಾತಾವರಣವೇ ಬದಲಾಗಿದೆ. ಇನ್ನು ಮುಂದೆ ಕೈಗಾರಿಕೆ ಕ್ರಾಂತಿಯ ಮೂಲಕ ವಿಜಯಪುರವನ್ನು ಮ್ಯಾಂಚೆಸ್ಟರ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಿದ್ದಾರೆ. ಮಹಿಳೆಯರು ಕಾಯಿಲೆಗಳಿಂದ ಸಾಯಬಾರದು. ಅನಾರೋಗ್ಯದಿಂದ ಬಳಲಬಾರದು. ಇದಕ್ಕಾಗಿ ಸ್ತ್ರೀರೋಗ ಶಾಸ್ತ್ರ ವಿಭಾಗದ ವೈದ್ಯರು ಸಕಲ ರೀತಿಯಲ್ಲಿ ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

ಸಂಘದ ರಾಜ್ಯಾಧ್ಯಕ್ಷೆ ಡಾ.ವಿದ್ಯಾ ಥೊಬ್ಬಿ ಮಾತನಾಡಿ, ಇದು ಕೇವಲ ಸಮ್ಮೇಳನವಲ್ಲ. ಮಹಿಳೆಯರ ಆರೋಗ್ಯ, ಸಬಲೀಕರಣಗೊಳಿಸುವ ಕಾರ್ಯಕ್ರಮ. ಮಹಿಳೆಯರ ಆರೋಗ್ಯದ ಬಗ್ಗೆ ಯುವ ವೈದ್ಯರಿಗೆ ಕೌಶಲ್ಯಾಭಿವೃದ್ಧಿಗೂ ಪೂರಕವಾಗಿದೆ. ನಾವು ಕೇವಲ ಮಹಿಳೆಯರ ಆರೋಗ್ಯ ಪೋಷಕರಲ್ಲ. ಅವರ ಜೀವನ ಸುಧಾರಿಸಲು ಶ್ರಮಿಸುತ್ತೇವೆ. ಸಂತಾನೋತ್ಪತ್ತಿಯಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಬಳಸಿಕೊಂಡು ತಾಯಿ ಮತ್ತು ಶಿಶು ಮರಣ ಪ್ರಮಾಣ ತಗ್ಗಿಸಲು ಯೋಜನೆ ರೂಪಿಸಬೇಕಿದೆ. ಮಹಿಳೆಯರ ಸ್ವಾಸ್ಥ್ಯ ನಮಗೆ ಹೆಚ್ಚಿನ ಕಾಳಜಿ ಅಗತ್ಯವಾಗಿದೆ ಎಂದು ಹೇಳಿದರು.

ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ಡಾ. ಆರ್. ಎಸ್. ಮುಧೋಳ ಮಾತನಾಡಿ, ಗ್ರಾಮೀಣ ಮಹಿಳೆಯರ ಕಲ್ಯಾಣ-ಕ್ಕಾಗಿ ವಿಶ್ವವಿದ್ಯಾಲಯ ಉತ್ತಮ ಕೆಲಸ ಮಾಡುತ್ತಿದೆ. ಸಾಮಾನ್ಯ ಹೆರಿಗೆಯನ್ನು ಉಚಿತವಾಗಿ ಮಾಡಿಸಲಾಗುತ್ತಿದೆ. ತಾಯಿ ಹಾಲು ಕೇಂದ್ರ ಸ್ಥಾಪಿಸಲಾಗಿದೆ. ಒಂದೆಡೆ ಸೇರುವುದು ಯಶಸ್ಸಾದರೆ, ಒಟ್ಟಿಗೆ ಕೆಲಸ ಮಾಡುವುದು ಸಂಪೂರ್ಣ ಯಶಸ್ಸು ಸಾಧಿಸಲು ಅವಕಾಶ ಕಲ್ಪಿಸುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಚಿವರು ಮತ್ತು ಗಣ್ಯರು ಸಮ್ಮೇಳನದ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಅಲ್ಲದೇ, ಸ್ತ್ರೀರೋಗ ಮತ್ತು ಪ್ರಸೂತಿ ವಿಭಾಗದಲ್ಲಿ ಜೀವಮಾನ ಸಾಧನೆಗಾಗಿ ಡಾ. ಅಂಬರೀಷ ಹೊನವಾಡ ಮತ್ತು ಡಾ. ಬಸವರಾಜ ಸಜ್ಜನ ಅವರನ್ನು ರಾಜ್ಯ ಸಂಘದ ಪರವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ವಿವಿ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಬಿ.ಎಲ್.ಡಿ.ಇ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯ ಡಾ. ಅರವಿಂದ ಪಾಟೀಲ, ಅಲ್-ಅಮೀನ್ ವೈದ್ಯಕೀಯ ಕಾಲೇಜಿನ ನಿರ್ದೇಶಕ ಡಾ. ಬಿ. ಎಸ್. ಪಾಟೀಲ, ಸಂಘದ ಪೋಷಕ ಡಾ. ಎಚ್. ನಾಗರಾಜ, ಗೌರವ ಕಾರ್ಯದರ್ಶಿ ಡಾ. ರಾಜಶ್ರೀ ಪಲಾಡಿ, ಸಂಘದ ನಿಕಟಪೂರ್ವ ಅಧ್ಯಕ್ಷೆ ಡಾ. ಕಸ್ತೂರಿ ವಿ. ಡೋಣಿಮಠ, ನಿಯೋಜಿತ ಅಧ್ಯಕ್ಷೆ ಡಾ. ಭಾರತಿ ರಾಜಶೇಖರ, ವಿಜಯಪುರ ಪ್ರಸೂತಿ ಮತ್ತು ಸ್ತ್ರೀರೋಗ ವೈದ್ಯರ ಸಂಘದ ಅಧ್ಯಕ್ಷ ಡಾ. ಎಸ್. ಆರ್. ಮುದನೂರ, ವಿವಿ ಸಮಕುಲಪತಿ ಡಾ. ಅರುಣ ಚಂ. ಇನಾಮದಾರ, ರಜಿಸ್ಟ್ರಾ ಡಾ. ಆರ್. ವಿ. ಕುಲಕರ್ಣಿ, ವೈದ್ಯಕೀಯ ಅಧೀಕ್ಷಕ ಡಾ. ರಾಜೇಶ ಹನ್ನುಟಗಿ, ಉಪಪ್ರಾಚಾರ್ಯ ಡಾ. ಎಂ. ಬಿ. ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

ಡಾ. ವೇದಾ ಕಮಲಾಪೂರಕರ ಪ್ರಾರ್ಥಿಸಿದರು. ಸಮ್ಮೇಳನ ಸಂಘಟನಾ ಅಧ್ಯಕ್ಷೆ ಡಾ. ಶೈಲಜಾ. ಆರ್. ಬಿದರಿ ಸ್ವಾಗತಿಸಿದರು. ಡಾ. ಜಯಶ್ರೀ ಮುಂಡೆವಾಡಿ, ಡಾ. ಶೋಭಾ ಗುಡದಿನ್ನಿ ಡಾ. ರಾಜೇಶ್ವರಿ, ಯಲಿವಾಲ ಹಾಗೂ ಡಾ. ಸುಮನ ಗಡ್ಡಿ ಪರಿಚಯಿಸಿದರು. ಡಾ. ದೀಪಾ ಪಾಟೀಲ ಮತ್ತು ಡಾ. ನಿರುಪಾ ಎನ್. ರಾಮಚಂದ್ರನ ಕಾರ್ಯಕ್ರಮ ನಿರೂಪಿಸಿದರು. ಡಾ. ನೀಲಮ್ಮಾ ಪಾಟೀಲ ವಂದಿಸಿದರು.

### ವಂಟಮೂರಿಯಲ್ಲಿ ಮಹಿಳೆ ವಿವಸ್ತ್ರಗೊಳಿಸಿ ದೌರ್ಜನ್ಯ ನಡೆಸಿದ ಘಟನೆಗೆ ಖಂಡನೆ

# ವಿಜಯಪುರದಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಬೆಳಗಾವಿ ತಾಲ್ಲೂಕು ವಂಟಮೂರಿ ಗ್ರಾಮದ ಪರಿಶಿಷ್ಟ ಪಂಗಡದ ಅಮಾಯಕ ಮಹಿಳೆಯನ್ನು ವಿವಸ್ತ್ರಗೊಳಿಸಿ ನಡೆದಿರುವ ದೌರ್ಜನ್ಯ ಖಂಡಿಸಿ ವಿಜಯಪುರ ನಗರದ ಸಿದ್ಧೇಶ್ವರ ದೇವಸ್ಥಾನದ ಎದುರಿಗೆ ಬೃಹತ್ ಪ್ರತಿಭಟನೆ ಹಮ್ಮಿಕೊಂಡು ಕಾಂಗ್ರೆಸ್ ವಿರುದ್ಧ ಘೋಷಣೆ ಹಾಕುವುದರ ಮೂಲಕ ಪ್ರತಿಭಟಿಸಲಾಯಿತು.

ಇದೇ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಎಸ್.ಪಾಟೀಲ (ಕುಚಬಾಳ) ಮಾತನಾಡಿ, ವಂಟಮೂರಿ ಗ್ರಾಮದಲ್ಲಿ ನಡೆದ ಘಟನೆ ನಾಗರೀಕ ಸಮಾಜಕ್ಕೆ ಅಂಟಿದ ಕಪ್ಪುಚುಕ್ಕೆಯಾಗಿದ್ದು, ಅಮಾಯಕ ಮಹಿಳೆಯನ್ನು ಬೆತ್ತಲೆ ಗೊಳಿಸಿ ಕಂಬಕ್ಕೆ ಕಟ್ಟಿ ಹಾಕಿ ಥಳಿಸಿದ್ದು ಅತ್ಯಂತ ಹೇಯ ಕೃತ್ಯ, ಸದರಿ ಘಟನೆಯು ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕವು ತಲೆ ತಗ್ಗಿಸುವಂತೆ ಮಾಡಿದೆ. ಇಷ್ಟಾದರೂ ಮುಖ್ಯಮಂತ್ರಿಗಳು ಸೌಜನ್ಯಕ್ಕಾದರೂ ಸಂತ್ರಸ್ತೆಯನ್ನು ಭೇಟಿಯಾಗುವ ಮಾನವೀಯ ಕಾಳಜಿ ಇದುವರೆಗೂ ತೋರಿಲ್ಲ, ಕಾಟಾಚಾರಕ್ಕೆ ಗೃಹ ಸಚಿವರು ಭೇಟಿಯಾಗಿ ಸಾಂತ್ವನ ಹೇಳಿರುವುದನ್ನು ಬಿಟ್ಟರೆ ಇನ್ನಾರು ಈ ಕಡೆ ತಲೆಹಾಕಿದಂತಿಲ್ಲ ನಿನ್ನೆ ದಿನ ಹೈಕೋರ್ಟ್, ಈ ದುರ್ಘಟನೆ ನಡೆಯಲು ಸರ್ಕಾರ ಹೇಗೆ ಬಿಟ್ಟಿದೆ?



ಪೊಲೀಸರ ಗಸ್ತು ಏಕೆ ಇರಲಿಲ್ಲ? ರಾಜ್ಯ ಸರಕಾರ ಇಂಥ ಘಟನೆ ಆಗದಂತೆ ತಡೆಯಲು ಏನು ಕ್ರಮ ಕೈಗೊಂಡಿದೆ? ಎಂದು ಪ್ರಶ್ನಿಸಿ ಸಂತ್ರಸ್ತೆಯ ಸಹಾಯಕ್ಕೆ ಧಾವಿಸದ ಕುರಿತು ರಾಜ್ಯ ಸರ್ಕಾರಕ್ಕೆ ಚಾಟಿ ಬೀಸಿದೆ. ಆದರೂ, ರಾಜ್ಯ ಸರಕಾರವು ಇದನ್ನು ಈ ಕ್ಷಣಕ್ಕೂ ಗಂಭೀರವಾಗಿ ಪರಿಗಣಿಸಿಲ್ಲದಿರುವುದು ಕಾಂಗ್ರೆಸ್ ಸರ್ಕಾರಕ್ಕೆ ಹೆಣ್ಣು ಮಕ್ಕಳ ಬಗ್ಗೆ ಇರುವ ತಾತ್ಸಾರ ಧೋರಣೆಯನ್ನು ಪ್ರದರ್ಶಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಲಿಂಬೆ ಅಭಿವೃದ್ಧಿ ಮಾಜಿ ಅಧ್ಯಕ್ಷ ಚಂದ್ರಶೇಖರ ಕವಟಗಿ ಮಾತನಾಡಿ, ಕಣ್ಣಿದ್ದು ಕುರುಡರಂತಾದ ಸರ್ಕಾರ ಇದಾಗಿದೆ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ರಾಜ್ಯದ ಅತೀವ ಶೋಚನೀಯ ಸ್ಥಿತಿ ಇದು ಎಂದರೆ ತಪ್ಪಾಗಿರಲಿಕ್ಕಿಲ್ಲ. ಮೀತಿಮಿ-ರಿದ ಭ್ರೂಣಹತ್ಯೆ, ಅವ್ಯಾಹತವಾಗಿ ಸಾಗುತ್ತಿರುವಾಗ ಕಣ್ಮುಚ್ಚಿ ಕುಳಿತ ಕಾಂಗಿ ಸರ್ಕಾರದ ಆಡಳಿತ ವ್ಯವಸ್ಥೆ ದುರಾಡಳಿತದ ಪರಮಾವಧಿಯಾಗಿದೆ ನಾಗರಿಕ ವ್ಯವಸ್ಥೆ ತಲೆತಗ್ಗಿಸುವಂತಾಗಿದೆ, ಇದಲ್ಲದೆ ಇತ್ತಿಚೆಗೆ ಲೋಕಸಭೆಯಲ್ಲೊ ನಡೆದ ದುಷ್ಕೃತ್ಯಕ್ಕೆ ಒಬ್ಬ ಮಾಜಿ ಮುಖ್ಯಮಂತ್ರಿಯಾಗಿದ್ದ ದಿಗ್ವಿ-ಜಯಸಿಂಗನಂತಹ ರಾಜಕಾರಣಿ ನಿರುದ್ಯೋಗದ ಸಮಸ್ಯೆಯಿಂದಾಗಿ ಈ ಕೃತ್ಯ ಜರುಗಿದೆ ಎಂದು ಸಮರ್ಥಿಸಿದಾಗ ಇದೆಲ್ಲವೂ ಭಯೋತ್ಪಾದನಾ ಚಟುವಟಿಕೆಗಳ ಪ್ರೋತ್ಸಾಹವಲ್ಲದೇ ಮತ್ತೇನು ಎಂದು ಪ್ರಶ್ನಿಸಿದರು.

ಮಳುಗೌಡ ಪಾಟೀಲ ಮಾತನಾಡಿದರು.

ಈ ಸಂದರ್ಭದಲ್ಲಿ ಪ್ರಕಾಶ ಅಕ್ಕಲಕೋಟ, ವಿವೇಕಾನಂದ ಡಬ್ಬಿ, ಬಸವರಾಜ ಬಿರಾದಾರ, ಮಲ್ಲಿಕಾರ್ಜುನ ಜೋಗೂರ, ವಿಠ್ಠಲ ಹೊಸಪೇಠ, ಭರತ ಕೋಳಿ, ಭೀಮಾಶಂಕರ ಹದನೂರ, ಸಂದೀಪ ಪಾಟೀಲ, ರಾಜೇಶ ತಾವಸೆ, ರಾಹುಲ ಜಾಧವ, ಕೃಷ್ಣಾ ಗುನ್ನಾಳಕರ, ಕಾಂತು ಶಿಂಧೆ, ಶಿವರುದ್ರ ಬಾಗಲಕೋಟ, ಮಲ್ಲಮ್ಮ ಜೋಗೂರ, ರಾಜಲಕ್ಷ್ಮಿ ಪರತನವರ, ಸಂಜಯಪಾಟೀಲ ಕನಮಡಿ, ಈರಣ್ಣ ರಾವೂರ, ವಿನಾಯಕ ದಹಿಂಡೆ, ಶ್ರೀಮತಿ ಕುರ್ಲೆ, ಮಂಬಾಲೇಶ್ರೀ ತೊನಶ್ಯಾಳ, ಸಂತೋಷ ನಿಂಬರಗಿ, ಆನಂದ ಮುಚ್ಚಂಡಿ, ಕುಮಾರ ಗಡಗಿ, ಪಾಪುಸಿಂಗ ರಜಪೂತ ಮುಂತಾದವರು ಇದ್ದರು.

### ಕೋಳಕೂರ ಶ್ರೀ ಸಿದ್ದಬಸವೇಶ್ವರರ 596 ನೇ ಜಯಂತೋತ್ಸವದಲ್ಲಿ ಸಂಗನಬಸವ ಶ್ರೀ ಶ್ಲಾಘನೆ

# ಮಾಲಿಪಾಟೀಲರ ಸೇವಾಕಾರ್ಯ ಅನುಕರಣೀಯ

**ಉದಯರಶ್ಮಿ ನ್ಯೂಸ್**

ವಿಜಯಪುರ: ಸಮಾಜದಲ್ಲಿ ಅದೆಷ್ಟೇ ದೊಡ್ಡವರಿರಲಿ, ಉನ್ನತ ಅಧಿಕಾರದಲ್ಲಿರಲಿ ಸೃಷ್ಠಿಕರ್ತನ ಮುಂದೆ ಎಲ್ಲರೂ ಚಿಕ್ಕವರು. ಪ್ರಾಂಜಲ ಮನದಿಂದ ಭಗವಂತನ ಆರಾಧನೆಯನ್ನು ಮಾಡಿದರೆ ಖಂಡಿತ ಫಲ ಸಿಗುತ್ತದೆ ಎಂದು ಮನಗೂಳಿ ಶ್ರೀ ಸಂಸ್ಥಾನ ಹಿರೇಮಠದ ಅಭಿನವ ಸಂಗನಬಸವ ಶಿವಾಚಾರ್ಯರು ಹೇಳಿದರು.

ಶನಿವಾರ ನಗರದ ಡಾ.ರಾಜಕುಮಾರ ಬಡಾವಣೆಯಲ್ಲಿ ಉದ್ಯಮಿ ಸಿ.ಎಂ.ಮಾಲಿಪಾಟೀಲ ಅವರು ಏರ್ಪಡಿಸಿದ ಕೋಳಕೂರ






ಶ್ರೀ ಸಿದ್ದಬಸವೇಶ್ವರರ 596 ನೇ ಜಯಂತೋತ್ಸವದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ದಾನಗಳಲ್ಲಿ ಅನ್ನದಾನ ಶ್ರೇಷ್ಠವಾದುದು. ಹಸಿದವರಿಗೆ ಅನ್ನ ನೀಡಿ. ಭಗವಂತ ಯಾವ ಸ್ವರೂಪದಲ್ಲಿ ಬರುವನೋ ಗೊತ್ತಿಲ್ಲ, ನಿಮ್ಮ ಆರ್ಥಿಕ ಸ್ಥಿತಿಗನುಗುಣವಾಗಿ ಆಗಾಗ ಅನ್ನದಾನ ಮಾಡುತ್ತಿರಿ ಎಂದು ಶ್ರೀಗಳು ಕರೆ ನೀಡಿದರು.

ಕಳೆದ ಹಲವಾರು ವರ್ಷಗಳಿಂದ ಉದ್ಯಮಿ ಸಿ.ಎಂ.ಮಾಲೀಪಾಟೀಲರು ಚಾಚೂತಪ್ಪದೆ ಸತ್ಸಂಗ, ಧರ್ಮಸಭೆ, ಅನ್ನದಾಸೋಹದಂತಹ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಕೋಳಕೂರ ಶ್ರೀ ಸಿದ್ದಬಸವೇಶ್ವರರ ಜಯಂತೋತ್ಸವವನ್ನು ಶ್ರದ್ಧಾ–ಭಕ್ತಿಯಿಂದ ಆಚರಿಸುತ್ತ ಬಂದಿದ್ದಾರೆ. ಅನ್ನದಾನದೊಂದಿಗೆ ಮರಣೋತ್ತರ ನೇತ್ರದಾನವನ್ನೂ ಮಾಡಿರುವ ಸಿ.ಎಂ. ಮಾಲಿಪಾಟೀಲರ ನಡೆ ಅನುಕರಣೀಯ ಎಂದು ಶ್ರೀಗಳು ಶ್ಲಾಘಿಸಿದರು.

ಮಾಲಿಪಾಟೀಲರ ವ್ಯಕ್ತಿತ್ವ ಕುರಿತು ನಿವೃತ್ತ ಡಿವೈಎಸ್ಪಿ ಚೌಕಿಮಠ ಮಾತನಾಡಿದರು.

ಮಹಾನಗರ ಪಾಲಿಕೆ ಸದಸ್ಯ ರಾಜು ಕುರಿ, ನಾಡಗೌಡ, ಭಾಗ್ಯಶ್ರೀ ಪಾಟೀಲ, ಕಮಲಾ ಬಿರಾದಾರ, ಈರಣ್ಣ ಪಟ್ಟಣಶೆಟ್ಟಿ ವೇದಿಕೆ ಮೇಲಿದ್ದರು.

ಇದೇ ಸಂದರ್ಭದಲ್ಲಿ ಮಾಲಿಪಾಟೀಲ ದಂಪತಿಯನ್ನು ಶ್ರೀಗಳು ಸನ್ಮಾನಿಸಿದರು.

ರಾಜಕುಮಾರ ಬಡಾವಣೆ ಸೇರಿದಂತೆ ಅಕ್ಕಪಕ್ಕದ ಬಡಾವಣೆಗಳ ನೂರಾರು ಜನ ಗಣ್ಯರು, ಮಹಿಳೆಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಮೋರಟಗಿ ಹೋಬಳಿ ಕೇಂದ್ರವನ್ನಾಗಿಸಲು ಮನವಿ

**ಉದಯರಶ್ಮಿ ನ್ಯೂಸ್**

ಮೋರಟಗಿ: ತಾಲೂಕಿನ ಗ್ರಾಮಗಳಾದ ಕುಳೇಕುಮಟಗಿ, ಬಗಲೂರ, ಹಾವಳಗಿ, ಕಕ್ಕಳಮೆಲಿ, ಹಂಚಿನಾಳ, ಜಾಟ್ನಳ, ಬಿಸನಾಳ, ಕೆರೂರ ಸೇರಿದಂತೆ ಹತ್ತು ಹಲವಾರು ಹಳ್ಳಿಗಳಿಗೆ ವ್ಯಾಪಾರ ವಹಿವಾಟಕ್ಕೆ ಮೋರಟಗಿ ಗ್ರಾಮವು ಕೇಂದ್ರ ಬಿಂದುವಾಗಿದೆ. ಸ್ಥಳೀಯವಾಗಿ 14 ಸಾವಿರಕ್ಕಿಂತಲೂ ಅಧಿಕ ಜನಸಂಖ್ಯೆ ಹೊಂದಿರುವ ಮೋರಟಗಿ ಗ್ರಾಮವನ್ನು ಹೋಬಳಿ ಕೇಂದ್ರವನ್ನಾಗಿ ಮಾಡಿ ಆದೇಶಿಸಬೇಕು ಎಂದು ಸ್ಥಳೀಯ ಶಾಸಕರಿಗೆ ಹಾಗೂ ಅಧಿಕಾರಿಗಳಿಗೆ ಕಾಂಗ್ರೆಸ್ ಮುಖಂಡ ಮೈಬೂಬಸಾಬ ಕಣ್ಣಿ ಸೇರಿದಂತೆ ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, 22ಕಿ.ಮೀ ಸಮೀಪದ ಸಿಂದಗಿ ತಾಲೂಕಿನಲ್ಲಿದ್ದ



ಮೋರಟಗಿ ಗ್ರಾಮವನ್ನು 45ಕಿಮೀ ದೂರದ ಆಲಮೇಲ ತಾಲೂಕಿಗೆ ಸೇರ್ಪಡೆಗೊಂಡಿದ್ದರಿಂದ ಸರಕಾರಿ ಸೌಲಭ್ಯಕ್ಕೆ, ವೃದ್ಧರು, ಅಂಗವಿಕಲರು ಬಹಳಷ್ಟು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ರೈತರಿಗೆ, ವೃದ್ಧರಿಗೆ, ಅಂಗವಿಕಲರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮೋರಟಗಿ ಗ್ರಾಮವನ್ನು ಹೋಬಳಿ ಗ್ರಾಮವನ್ನಾಗಿ ಆದೇಶಿಸಲು ಹಿಂದಿನ ಶಾಸಕರಿಗೂ, ಸಚಿವರಿಗೂ ಹತ್ತು ಹಲವಾರು ಬಾರಿ ಮನವಿ ಮಾಡಿದ್ದೇವೆ. ಆದರೆ ಆಶ್ವಾಸನೆಗಳ ಸುರಿಮಳೆಗಳೇ ಬಂದಿವೆ ವಿನಃ ಕಾರ್ಯರೂಪಕ್ಕೆ ಬಂದಿಲ್ಲ. ನೂತನ ಶಾಸಕರಾಗಿ ಆಯ್ಕೆಯಾದ ಅಶೋಕ ಮನಗೂಳಿ ಅವರಿಗೂ ಕೂಡಾ ಈಗಾಗಲೇ ಈ ಕುರಿತು ಮನವಿ ಮಾಡಿದ್ದೇವೆ. ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಶಾಸಕರು ಹೋಬಳಿ ಕೇಂದ್ರವನ್ನಾಗಿಸುವುದಾಗಿ ಭರವಸೆ ಕೂಡಾ ನೀಡಿದ್ದಾರೆ. ಆದಷ್ಟು ಬೇಗನೆ ಸರಕಾರಕ್ಕೆ ಒತ್ತಾಯಿಸಿ ಶೀಘ್ರದಲ್ಲೇ ಕಾರ್ಯರೂಪಕ್ಕೆ ತರಬೇಕು ಎಂದು ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಸತ್ಯನಾರಾಯಣ ತಿವಾರಿ, ವೀರನಗೌಡ ಪಾಟೀಲ, ಮುತ್ತಪ್ಪ ಸಿಂಗೆ, ಸಲೀಮ್ ಕಣ್ಣಿ, ಸೇರಿದಂತೆ ಪ್ರಗತಿಪರ ರೈತರು ಗ್ರಾಮಸ್ಥರು ಇದ್ದರು.

# ಡಿ.18 ರಿಂದ ಹಗಲು–ರಾತ್ರಿ ಧರಣಿ ಸತ್ಯಾಗ್ರಹ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಇಲ್ಲಿನ ತಹಶೀಲ್ದಾರ ಕಚೇರಿಯ ಆವರಣದಲ್ಲಿ ಕೆಲ ಬೇಡಿಕೆಗಳನ್ನು ಮುಂದಿಟ್ಟು ಡಿ.18 ರಿಂದ ಹಗಲು ರಾತ್ರಿ ಧರಣಿ ಸತ್ಯಾಗ್ರಹ ಆರಂಭಿಸುವದಾಗಿ ರೈತ ಹಿತರಕ್ಷಣಾ ವೇದಿಕೆಯ ತಾಲೂಕು ಅಧ್ಯಕ್ಷ ಎಂ.ಎಸ್.ಸಿದರೆಡ್ಡಿ ಮಾಹಿತಿ ನೀಡಿದ್ದಾರೆ.

ತಾಲೂಕಿನ ನಾಗರಬೆಟ್ಟ ಗ್ರಾಮದ ಸರಕಾರಿ ಗುಡ್ಡಗಳ ಸರ್ವೆ ನಂ–51 ಹಾಗೂ 89 ಇವುಗಳಿಗೆ ಸಂಬಂಧಿಸಿದಂತೆ ಸರ್ಕಾರದ ಗೆರೆಯ ಕೆಳಗಿರುವ ವ್ಯಕ್ತಿಗಳ ಹೆಸರುಗಳನ್ನು ಕೈಬಿಡುವಂತೆ ಮತ್ತು ಕೆಲ ರೈತರ ಜಮೀನುಗಳಿಗೆ ರಸ್ತೆ ಮಾಡಿಕೊಡುವ ಕುರಿತು ಡಿ.17 ರ ಒಳಗಾಗಿ ಸಮಸ್ಯೆಯನ್ನು ಬಗೆಹರೆಸುವಂತೆ ಮತ್ತು ಸಮಸ್ಯೆ ಬಗೆಹರೆಯದಿದ್ದರೆ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳುವದಾಗಿ ಈ ಮೊದಲೇ ಮನವಿ ಪತ್ರವನ್ನು ನೀಡಲಾಗಿತ್ತು. ನಮ್ಮ ಸಮಸ್ಯೆ ಬಗೆಹರೆಯದ ಕಾರಣ ಈ ಧರಣಿ ಆರಂಭಿಸುವದಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಭೀಮಾಂತರಂಗ ಜಗಲಿ, ಆನ್ ಲೈನ್ ಉಪನ್ಯಾಸ ಮಾಲಿಕೆಯಲ್ಲಿ ಡಾ.ಮಧುಬಾಲ ಅಭಿಮತ

# ಕನ್ನಡ ಸೇವೆಗೆ ಜೀವನ ಸವೆಸಿದ ಜಯದೇವಿ ಅಗಾಡೆ

**ಉದಯರಶ್ಮಿ ನ್ಯೂಸ್**

ಇಂಡಿ: 19ನೇ ಶತಮಾನದಲ್ಲಿ ಕರ್ನಾಟಕ, ಕನ್ನಡ ಮತ್ತು ಕನ್ನಡ ಜನರಿಗೋಸ್ಕರ ದೂರದ ಗಡಿ ಸೊಲ್ಲಾಪುರದಲ್ಲಿ ನಿಂತು ಕನ್ನಡಿಗರ ಕೋಟೆ ಕಟ್ಟಿ ಅದನ್ನು ರಕ್ಷಣೆ ಮಾಡಿದ ಅಪ್ರತಿಮ ಹೋರಾಟಗಾರ್ತಿ, ಗಡಿನಾಡ ಸಿಂಹಿಣಿ ಜಯದೇವಿತಾಯಿ ಲಿಗಾಡೆ ಆಗಿದ್ದರು ಎಂದು ಸೋಲಾಪುರದ ಖ್ಯಾತ ವೈದ್ಯ–ಸಾಹಿತಿ ಡಾ.ಮಧುಬಾಲ ಲಿಗಾಡೆ ಹೇಳಿದರು.

ಅವರು ಇಂಡಿಯ ಭೀಮಾಂತರಂಗ ಜಗಲಿ, ಆನ್ ಲೈನ್ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಿಂದ ಹಮ್ಮಿಕೊಂಡ ಉಪನ್ಯಾಸ ಮಾಲಿಕೆ–2 ರಲ್ಲಿ ಜಯದೇವಿತಾಯಿ ಲಿಗಾಡೆ ಬದುಕು–ಬರಹ ಕುರಿತು ಉಪನ್ಯಾಸ ನೀಡುತ್ತಾ ಈ ಮಾತುಗಳನ್ನು ಹೇಳಿದರು.

ಸಿದ್ದರಾಮೇಶ್ವರ ಪುರಾಣ ಮಹಾಕಾವ್ಯ ಕರ್ತೃವಾಗಿ,ಕನ್ನಡ ಕಾವಲುಗಾರ್ತಿಯಾಗಿ,ಸಾಹಿತ್ಯ ಸಾಧಕಿಯಾಗಿ,

ಆಧ್ಯಾತ್ಮ ಚಿಂತನಕಾರರಾಗಿ, ಕುಟುಂಬವತ್ಸಲೆಯಾಗಿ ಈ

ಜಂಗಮಂತಾಯಿಯು ತಾಯ್ನುಡಿಯ ಸೇವೆಗಾಗಿ ತಮ್ಮ ಜೀವನ ಸವೆಸಿದರು. ಕನ್ನಡ ನಾಡು–ನುಡಿ ಬೆಳೆಸುವಲ್ಲಿ ಅವರ ಅಗಾಧ ಪರಿಶ್ರಮ, ಅದ್ಭುತಕಾರ್ಯ, ಅಪಾರ ಸಾಧನೆ ಇಂದಿಗೂ ಚಿರಸ್ಥಾಯಿಯಾಗಿದ್ದು, ಕನ್ನಡಿಗರ ಅಭಿಮಾನದ ಮಹಾತಾಯಿಯೇ ಆಗಿದ್ದಾರೆ ಎಂದು ಹೇಳಿದರು.

ಹುಟ್ಟಿನಿಂದ ಹೋರಾಟ ಮನೋಭಾವ ಮೈಗೂಡಿಸಿಕೊಂಡು ಕನ್ನಡ ಚಳವಳಿ, ಸ್ವಾತಂತ್ರ ಏಕೀಕರಣ, ದಲಿತ ವಿಮೋಚನೆ, ಮಹಿಳಾಪರ ಕಾಳಜಿ, ಕಾರ್ಮಿಕ ಕಲ್ಯಾಣ, ಮಾನವಹಕ್ಕು, ಮೂಢನಂಬಿಕೆ, ಕಂದಾಚಾರ, ಮನುಷ್ಯತ್ವದ ಅರಿವು, ಶಿಕ್ಷಣ ಜಾಗೃತಿ, ಕಲೆ, ಸಾಹಿತ್ಯ, ಸಂಸ್ಕೃತಿ, ನಾಡಸಂರಕ್ಷಣೆಯಂತಹ ಹೋರಾಟದ ಜೊತೆಯಲ್ಲೇ ಅಷ್ಟೇ ಗಂಭೀರವಾಗಿ ಸಾಹಿತ್ಯ ಕೃಷಿಯನ್ನೂ ಮಾಡಿ ಸಾಹಿತ್ಯ ನಕ್ಷತ್ರವಾಗಿ ಕಲ್ಯಾಣದಲ್ಲಿ ಬಾಳ್ವೆ ಕಳೆದವರು ಎಂದು ಹೇಳಿದರು.

ಸಿಂದಗಿಯ ಜಾನಪದ ವಿದ್ವಾಂಸ ಡಾ.ಎಂ ಎಂ ಪಡಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಾನಪದದ ಸೊಗಡಿನಿಂದ ಕೂಡಿದ ಕವಿತೆ–ಕಾವ್ಯ ರಚಿಸಿರುವ ಜಯದೇವಿತಾಯಿ ಲಿಗಾಡೆ ಅವರ ಬರವಣಿಗೆಯಲ್ಲಿ ಸ್ತ್ರೀ ಹೃದಯದ ರಸಾನುಭವದ ಸಂಪತ್ತಿನ ಅಭಿವ್ಯಕ್ತಿಯನ್ನು ಕಾಣಬಹುದು.

ಅವರು ಆಗರ್ಭ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದ್ದರೂ ವೈಭವದ ಜೀವನವನ್ನು ತ್ಯಜಿಸಿ, ಗಾಂಧೀಜಿಯವರಿಂದ ಪ್ರಭಾವಿತರಾಗಿ, ಜೀವನದ ಕೊನೆಯವರೆಗೂ ನಿರಾಡಂಬರ ಜೀವನ ಸಾಗಿಸಿದ್ದರು ಎಂದು ಹೇಳಿದರು.

ಡಾ.ಡಿ ಎನ್ ಅಕ್ಕಿ, ಡಾ.ಚನ್ನಪ್ಪ ಕಟ್ಟಿ, ರಾಘವೇಂದ್ರ ಕುಲಕರ್ಣಿ,



ಸಂತೋಷ ಬಂಡೆ, ಗೀತಯೋಗಿ, ಬಸವರಾಜ ಕಿರಣಗಿ, ಶ್ರೀಧರ ಹಿಪ್ಪರಗಿ,ಸುಜಾತಾ ಬೀಳಗಿ, ಪ್ರಶಾಂತ ಕುಲಕರ್ಣಿ,

ಬಿ ಸಿ ಭಗವಂತಗೌಡರ, ಸಂಜಯ ಬುಲಬುಲೆ, ರಾಜಶೇಖರ ಮಾರನೂರ, ಸಿದ್ರಾಮಪ್ಪ ಮಾರನೂರ ಬಿ ಎನ್ ಹಿರೇಮಠ ಸೇರಿದಂತೆ ಅನೇಕ ಸಾಹಿತ್ಯಾಸಕ್ತರು ಭಾಗವಹಿಸಿದ್ದರು.

ನಾದ ಕೆಡಿ ಸರಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಸಿ ಎಂ ಬಂಡಗರ ಸ್ವಾಗತಿಸಿ, ಪರಿಚಯಿಸಿದರು. ಶಿಕ್ಷಕಿ ಸರೋಜಿನಿ ಮಾವಿನಮರ ನಿರೂಪಿಸಿದರು. ಶಿಕ್ಷಕ ವೈ ಜಿ ಬಿರಾದಾರ ವಂದಿಸಿದರು.

### ಪುರಸಭೆ ಮುಖ್ಯಾಧಿಕಾರಿ ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಶಾಸಕ ಅಶೋಕ ಮನಗೂಳಿ ತಾಕೀತು

# ಕುಡಿವ ನೀರಿನ ವಿಚಾರದಲ್ಲಿ ಜನತೆಗೆ ಸಮಸ್ಯೆ ತಾರದಿರಿ

**ಉದಯರಶ್ಮಿ ನ್ಯೂಸ್**

ಸಿಂದಗಿ: ಪಟ್ಟಣದ ವಿದ್ಯಾನಗರದಲ್ಲಿನ ನೀರು ಶುದ್ದೀಕರಣ ಘಟಕಕ್ಕೆ ಶಾಸಕ ಅಶೋಕ ಮನಗೂಳಿ ಶನಿವಾರ ಭೇಟಿ ನೀಡಿ ಅಲ್ಲಿನ ಅವ್ಯವಸ್ಥೆಗಳನ್ನು ನೋಡಿ ಪುರಸಭೆಯ ಮುಖ್ಯಾಧಿಕಾರಿ ಗುರುರಾಜ ಚೌಕಿಮಠ ಮತ್ತು ಸಂಬಂಧಿಸಿದ ಅಧಿಕಾರಿಗಳನ್ನು ತೀವ್ರ ತರಾಟೆಗೆ ತಗೆದುಕೊಂಡರು.

ಮುಂಬರುವ ಬೇಸಿಗೆಗೆ ಕುಡಿಯುವ ನೀರಿನ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಅದಕ್ಕೆ ಬೇಕಾಗಿರುವ ಅನುದಾನವಾಗಲಿ ಮತ್ತು ಇನ್ನಿತರ ವ್ಯವಸ್ಥೆಯಾಗಲಿ ನಾನು ಪೂರೈಕೆ ಮಾಡಲು ಸಿದ್ದನಾಗಿದ್ದೇನೆ. ಕುಡಿಯುವ ನೀರಿನ ವಿಚಾರದಲ್ಲಿ ಜನತೆಗೆ ಸಮಸ್ಯೆ ಎಂದೂ ಬರಬಾರದು. ಮನಸ್ಸಿನಿಂದ ಕಾರ್ಯ ಮಾಡಿ ಎಂದು ತರಾಟೆ ತಗೆದುಕೊಂಡ ಶಾಸಕರು, ಪಟ್ಟಣದ ಜನಸಂಖ್ಯೆ ಹೆಚ್ಚಾಗಿರುವುದರಿಂದ ಒಂದು ನೀರಿನ ಘಟಕದಿಂದ ನೀರು ಪೂರೈಕೆ ಮಾಡಲು ಸುಮಾರು ಎಂಟತ್ತು ದಿನಗಳು ಬೇಕಾಗುತ್ತದೆ. ಅದಕ್ಕೆ ಹಳೆಯ ನೀರಿನ



ಘಟಕವನ್ನು ಪುನಶ್ಚೇತನಗೊಳಿಸಿ ನೀರು ಪೂರೈಕೆಯಾದಲ್ಲಿ ಜನತೆಗೆ 3–4 ದಿನಗಳಿಗೊಮ್ಮೆ ನೀರು ಪೂರೈಸಲು ಸಹಾಯವಾಗುತ್ತದೆ. ಈ ಉದ್ದೇಶದಿಂದ ನಾನ್ ಮೀಲಿಯನ್ ಪ್ಲಸ್ ಸೀಟಿಜ್ ಯೋಜನೆಯಡಿಯಲ್ಲಿ ಅಂದಾಜು ರೂ.40.ಲಕ್ಷ ರೂಗಳಲ್ಲಿ ಹಳೆ ನೀರಿನ ಘಟಕವನ್ನು ನವೀಕರಿಸುವ ಕಾರ್ಯ ಪ್ರಾರಂಭ ಮಾಡುತ್ತೇವೆ. ಇದರಿಂದ ಪಟ್ಟಣದ ಜನತೆ ಅನುಭವಿಸುವ ಕುಡಿಯುವ ನೀರಿನ ಸಮಸ್ಯೆಗೆ ಮುಕ್ತತೆ ದೊರಕಿದಂತಾಗುತ್ತದೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಈ ವೇಳೆ ಪುರಸಭೆಯ ಮುಖ್ಯಾಧಿಕಾರಿ ಗುರುರಾಜ ಚೌಕಿಮಠ ಮಾತನಾಡಿ, ಇಲ್ಲಿ ಎರಡು ನೀರನ ಘಟಕಗಳಿವೆ. ಆದರೆ ಸುಮಾರು 12 ವರ್ಷಗಳಿಂದ ಹಳೆ ಘಟಕ ಸ್ಥಗಿತಗೊಂಡಿದೆ. ಪ್ರಸ್ತುತ ಹೊಸದಾಗಿ ನಿರ್ಮಾಣಗೊಂಡ ಘಟಕದಿಂದಲೇ ನೀರು ಪೂರೈಕೆ ಮಾಡುತ್ತಿದ್ದೇವೆ. ಹಳೆಯ ಘಟಕವನ್ನು ದುರಸ್ಥಿ ಮಾಡಿ ಜನತೆಗೆ ಅನುಕೂಲ ಮಾಡಲು ಕ್ರಮ ಕೈಗೊಳ್ಳುತ್ತೇವೆ ಎಂದರು.

ಈ ಸಂದರ್ಭದಲ್ಲಿ ನೀರು ಸರಬರಾಜು ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಶ್ರೀನಿವಾಸ ಮತ್ತು ಪುರಸಭೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು

# ಡಾ.ಸಂಜೀವರಿಗೆ ಅಂಬೇಡ್ಕರ ನ್ಯಾಶನಲ್ ಫೆಲೋಶಿಫ್ ಪ್ರಶಸ್ತಿ

**ಉದಯರಶ್ಮಿ ನ್ಯೂಸ್**

ಇಂಡಿ: ತಾಲೂಕಿನ ಅಂಜುಟಗಿ ಗ್ರಾಮದ ನಿವಾಸಿ ತಂದೆ ಕಾಮಣ್ಣ ಹರಳಯ್ಯ ಮತ್ತು ತಾಯಿ ವಿಮಲಾಬಾಯಿ ಇವರ ಪುತ್ರ ಡಾ. ಸಂಜೀವ ಹರಳಯ್ಯ ಇವರಿಗೆ ನವದೆಹಲಿಯಲ್ಲಿ ನಡೆದ 39 ನೇ ರಾಷ್ಟ್ರೀಯ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ವತಿಯಿಂದ ಡಾ. ಬಿ.ಆರ್.ಅಂಬೇಡ್ಕರ ನ್ಯಾಶನಲ್



ಫೆಲೋಶಿಫ್ ಪ್ರಶಸ್ತಿ ನೀಡಿ ಗೌರವಿಸಿದೆ.

ಡಾ. ಸಂಜೀವ ಅವರ ಶಿಕ್ಷಣ ಮತ್ತು ಸಾಧನೆ ಪರಿಗಣಿಸಿ ಈ ಗೌರವ ನೀಡಿದೆ.

ಬಡತನ ಕುಟುಂಬದಲ್ಲಿ ಜನಿಸಿದ ಡಾ. ಸಂಜೀವ ಗದಗ ವೈದ್ಯಕೀಯ ವಿಜ್ಞಾನಿಗಳ ಸಂಸ್ಥೆಯಲ್ಲಿ ಶುಶ್ರೂಷಾಧಿಕಾರಿ ಮತ್ತು ಸರಕಾರಿ ಶುಶ್ರೂಷಾ ಮಹಾವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದು ಅವರು ಬರೆದ ಮಕ್ಕಳು ಕಲಿಕೆ ಆಲಿಕೆಗಳು ಪ್ರಬಂದಕ್ಕೆ ಅರುಣಾಚಲ ಪ್ರದೇಶದ ಹಿಮಾಲಯ ವಿವಿ ಡಾಕ್ಟರೇಟ ಪದವಿ ನೀಡಿ ಗೌರವಿಸಿದೆ.

ಮತ್ತು ಇಂಟರ್ ನ್ಯಾಶನಲ್ ಜನರಲ್ ಆಫ್ ಅಡ್ವಾನ್ಸ ಸೆಕ್ರೆಟರಿ ನರ್ಸಿಂಗ್ ಸಹ ಎಡಿಟರ್ ಆಗಿ ಆಯ್ಕೆ ಆಗಿದ್ದಾರೆ.

# ಯೋಗಸಾಧನೆ ಬಾಲ್ಯದಿಂದಲೇ ರೂಢಿಸಿಕೊಳ್ಳಿ :ಕುಲಕರ್ಣಿ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಧ್ಯಾನ, ಯೋಗ ಸಾಧನೆಯನ್ನು ಬಾಲ್ಯದಿಂದಲೇ ರೂಢಿಸಿಕೊಂಡಲ್ಲಿ ಜೀವನದ ಯಾವುದೇ ಹಂತದಲ್ಲಿ ಏನೇ ಸಮಸ್ಯೆಗಳು ಬಂದರೂ ನಾವು ಎದುರಿಸಬಹುದು ಎಂದು ತಂಗಡಗಿ ಸರಕಾರಿ ಪ್ರೌಢ ಶಾಲೆಯ ಮುಖ್ಯಗುರು ಶ್ರೀಮಾಣಿಕ್ ಕುಲಕರ್ಣಿ ಹೇಳಿದರು.

ತಾಲೂಕಿನ ಬಿದರಕುಂದಿ ಗ್ರಾಮದ ಸರ್ವಪಲ್ಲಿ ಡಾ.ರಾಧಾಕೃಷ್ಣನ್ ಪಿ.ಯು. ಕಾಲೇಜಿನಲ್ಲಿ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಯತಿವರೇಣ್ಯರಾದ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಆಯೋಜಿಸಿರುವ ಭಗವದ್ಗೀತಾ ಅಭಿಯಾನ ಕರ್ನಾಟಕ–2023ರ ತಾಲೂಕಾ ಮಟ್ಟದ ಸಪ್ತಾಹದ ಸಮಾಪ್ತಿ ದಿನದ ಉಪನ್ಯಾಸಮಾಲಿಕೆ ಕಾರ್ಯಕ್ರಮದಲ್ಲಿ ವಿಶ್ವವಂದಿತೆ ಭಗವದ್ಗೀತೆಯೆ ಎನ್ನುವ ವಿಷಯದ ಮೇಲೆ ಅವರು ಉಪನ್ಯಾಸ ನೀಡಿದರು.



ಭಾರತದಲ್ಲಿ ಸ್ವಾಮಿ ವಿವೇಕಾನಂದ, ಗಾಂಧೀಜಿಯವರಿಂದ ಹಿಡಿದು ಬಹುತೇಕ ಉನ್ನತಾದರ್ಶ ಹೊಂದಿದ ವ್ಯಕ್ತಿಗಳ ಬದುಕಿನ ಹಿಂದೆ ಭಗವದ್ಗೀತೆ ಪ್ರಭಾವ ಬೀರಿದೆ. ಅಷ್ಟೇ ಅಲ್ಲದೆ ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿಯೇ ಸ್ವಾಮಿ ವಿವೇಕಾನಂದರು ಗೀತೆಯ ಮಹತ್ವವನ್ನು ಪ್ರಪಂಚಕ್ಕೆ ಸಾರಿ ಬಂದು ಶತಮಾನಗಳೇ ಸಂದುಹೋಗಿದೆ. ಆವತ್ತಿನ ದಿವಸ ಭಾರತಕ್ಕೆ ಅಮೇರಿಕಾ ರಾಷ್ಟ್ರ ಗೌರವಿಸಿರುವುದು ಭಾರತದ ಸಂಸ್ಕೃತಿಯ ಸಹೋದರತ್ವ ಭಾವನೆಗೆ ಗಾಂಧೀಜಿಯವರು ಗೀತೆಯೇ ನನ್ನ ತಾಯಿಯೆಂದು ನಿಲುಮೆ ತಾಳಿದ್ದನ್ನು ನೆನೆಯಬಹುದು. ವಿದೇಶಿಯ ದಾರ್ಶನಿಕರು ಭಾರತಕ್ಕೆ ಬಂದು ಸಂಸ್ಕೃತ ಕಲಿತು ಭಗವದ್ಗೀತೆಯನ್ನು ಬೇರೆ ಬೇರೆ ಭಾಷೆಗೆ ತರ್ಜುಮೆ ಮಾಡಿಸಿರುವುದನ್ನು ನೋಡಬಹುದಾಗಿದೆ. ಅಲ್ಲದೆ ತನ್ಮೂಲಕ ಅನ್ವೇಷಣೆಗೆ ತೊಡಗಿಸಿಕೊಂಡಿದನ್ನು ಗಮನಿಸಬಹುದಾಗಿದೆ. ಭಾರತ ವೇದ ಪುರಾಣಗಳ ಅನ್ವಯಕ್ಕೆ ಸಕ್ರೀಯವಾದ ಅನುಭವ ಪಡೆದ ವಿಚಾರ ಹಂಚಿಕೊಂಡಿದ್ದನ್ನು ನಿದರ್ಶನದೊಂದಿಗೆ ವಿವರಿಸಿದರು.

ಕೋಳೂರು ಸರಕಾರಿ ಪ್ರೌಢ ಶಾಲೆ ಮುಖ್ಯೋಪಾಧ್ಯಾಯ ರುದ್ರೇಶ ಕಿತ್ತೂರ ಮಾತನಾಡಿ, ಬೆಳಕಿನ ಕಡೆಗೆ ಚಲಿಸುವ ದೇಶವಿದ್ದರೆ ಅದು ಭಾರತ ಮಾತ್ರ. ಮಹಾಭಾರತವೆಂದರೆ ಮಹಾಬೆಳಕಿನ ಕಡೆಗೆ ಚಲಿಸುವುದು ಎಂದರ್ಥ. ಅಂತಹ ಬೆಳಕು ನಮ್ಮಲ್ಲಿಯೇ ಇದೆ. ಅದರ ದಿಕ್ಕನ್ನು ತೋರಿಸುವ ಕೆಲಸ ಗೀತೆಯಲ್ಲಿದೆ ಎಂದರು.

ಸಂಸ್ಥೆಯ ಅಧ್ಯಕ್ಷ ವೆಂಕನಗೌಡ ಪಾಟೀಲ್ ಅಧ್ಯಕ್ಷೀಯ ನುಡಿಗಳನ್ನಾಡಿದರು. ಈ ಸಂದರ್ಭದಲ್ಲಿ ಶಾಂತಾ ಭಟ್ಟ, ರೇಣುಕಾ ಸಜ್ಜನ, ಲೀಲಾ ಭಟ್ಟ, ಎಮ್.ಪಿ.ಪಡದಾಳಿ, ರಮೇಶ ಮಡಿವಾಳರ್, ಶಂಕರಗೌಡ ಹಿರೇಗೌಡರ್, ಅನ್ನಪೂರ್ಣ ನಾಗರಾಳ, ರೂಪಾ ನಾಟೇಕಾರ್ ಸೇರಿದಂತೆ ಮತ್ತೀತರರು ಇದ್ದರು. ಜ್ಞಾನ ಭಾರತಿ ವಿದ್ಯಾ ಮಂದಿರದ ಗೀತ ಗಾಯನ ತಂಡದವರು ಗುರುಮಾತೆ ರಂಜಿತಾ ಹೆಗಡೆ ನೇತೃತ್ವದಲ್ಲಿ ಸಾಮೂಹಿಕವಾಗಿ ಭಗವದ್ಗೀತೆಯ 10ನೇ ಅಧ್ಯಾಯವನ್ನು ಪಠಿಸಿದರು. ಪ್ರಾಚಾರ್ಯ ಜಗದೀಶ ಬಿರಾದಾರ ಸ್ವಾಗತಿಸಿದರು. ಸಂಚಾಲಕ ರಾಮಚಂದ್ರ ಹೆಗಡೆ ಆಶಯದ ನುಡಿಗಳನ್ನಾಡಿದರು. ಉಪನ್ಯಾಸಕ ಶಂಕರ ಬೇವಿನಗಿಡದ ನಿರ್ವಹಿಸಿದರು. ಉಪನ್ಯಾಸಕಿ ಶ್ರೀದೇವಿ ಪಾಟೀಲ ವಂದಿಸಿದರು.

## ಹೊನವಾಡ ಶಾಲೆಗಳಿಗೆ ಬಿಇಓ ಬಳೋಲಮಟ್ಟಿ ಬೇಟಿ



**ಉದಯರಶ್ಮಿ ನ್ಯೂಸ್**

ತಿಕೋಟಾ: ತಾಲ್ಲೂಕಿನ ಹೊನವಾಡ ಗ್ರಾಮದ ಉರ್ದು ಹಿರಿಯ ಪ್ರಾಥಮಿಕ ಶಾಲೆ ಹಾಗೂ ವಿ ವಿ ಎಸ್ ಪ್ರೌಢಶಾಲೆ ಹೊನವಾಡಕ್ಕೆ ವಿಜಯಪುರ ಗ್ರಾಮೀಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಪ್ರಮೋದಿನಿ ಬಳೋಲಮಟ್ಟಿಯವರು ಭೇಟಿ ನೀಡಿ ಪರಿಶೀಲಿಸಿದರು.

ಸಿ ಆರ್ ಪಿ ಸಂಯೋಜಕರಾದ ಶ್ರೀಮತಿ ಸುಜಾತಾ ಬಾಗಲಕೋಟ ಪಾಲ್ಗೊಂಡಿದ್ದರು.

ಸಂಸ್ಥೆಯ ಅಧ್ಯಕ್ಷ ನಳಿನಿಕಾಂತ ಸಾವಂತ, ಪ್ರಾಚಾರ್ಯ ಎಂ ಎ ಹಿರೇಮಠ ಹಾಗೂ ಸಹ ಶಿಕ್ಷಕರು ಇದ್ದರು.

### ಪದವಿ-ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಘಟಿಕೋತ್ಸವ ಉದ್ಘಾಟಿಸಿದ ಎಂಎಲ್ಸಿ ಸುನೀಲಗೌಡ ಪಾಟೀಲ ಅಭಿಮತ

# ಆಯುರ್ವೇದ ವೈದ್ಯ ಪದ್ಧತಿಯಿಂದ ಆರೋಗ್ಯವಾಗಿರಲು ನೆರವು

**ಉದಯರಶ್ಮಿ ನ್ಯೂಸ್**

ವಿಜಯಪುರ: ಎವಿಎಸ್ ಆಯುರ್ವೇದ ವೈದ್ಯ ಪದ್ಧತಿ ಕೊರೊನಾ ಸಂಕಷ್ಟ ಸಮಯದಲ್ಲಿ ರೋಗ ಪ್ರತಿರೋಧಕ ಶಕ್ತಿ ಹೆಚ್ಚಿಸಿ ಆರೋಗ್ಯವಾಗಿರಲು ಬಹಳಷ್ಟು ಜನ-ರಿಗೆ ನೆರವಾಗಿದೆ ಎಂದು ವಿಧಾನ ಪರಿಷತ ಸದಸ್ಯ ಮತ್ತು ಬಿ.ಎಲ್.ಡಿ.ಇ ಸಂಸ್ಥೆಯ ನಿರ್ದೇಶಕ ಸುನೀಲಗೌಡ ಪಾಟೀಲ ಹೇಳಿದ್ದಾರೆ.

ಶನಿವಾರ ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನೆ ಕೇಂದ್ರದಲ್ಲಿ 2017ನೇ ವರ್ಷದ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಅಂಗವಾಗಿ ನಡೆದ ಘಟಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಎವಿಎಸ್ ಆಯುರ್ವೇದ ಮಹಾವಿದ್ಯಾಲಯ ಕೊರೊನಾ ಸಮಯದಲ್ಲಿ ರೋಗ ಪ್ರತಿರೋಧಕ ಚೂರ್ಣ ತಯಾರಿಸಿ ಕೊರೊನಾ ವಾರಿಯರ್ಸ್ ಮತ್ತು ಜನಸಾಮಾನ್ಯ-ರಿಗೂ ಉಚಿತವಾಗಿ ವಿತರಿಸಿದೆ. ಇದು ಅಂದಿನ ಕಠಿಣ ದಿನಗಳಲ್ಲಿ ಜನರಲ್ಲಿ ರೋಗ ಪ್ರತಿರೋಧಕ ಶಕ್ತಿ ಹೆಚ್ಚಳಕ್ಕೆ ಅನುಕೂಲವಾಗಿದೆ. ಇನ್ನು ಮುಂದೆಯೂ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಮತ್ತು ವೈದ್ಯರು ನಡೆಸುವ ಸಂಶೋಧನೆಗಳಿಗೆ ಸಕಲ ರೀತಿಯ ನೆರವು ನೀಡಲಾಗುವುದು. ಜನಸೇವೆಯೇ ನಮ್ಮ ಪ್ರಮುಖ ಧ್ಯೇಯವಾಗಿದ್ದು, ವಿದ್ಯಾರ್ಥಿಗಳಿಗೆ ಬೇಕಾಗುವ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗಿದೆ. ಹೀಗಾಗಿ ಹೆಚ್ಚೆಚ್ಚು ಸಂಶೋಧನೆ ನಡೆಸಬೇಕು ಎಂದು ಅವರು ಕರೆ ನೀಡಿದರು.



ಹುಬ್ಬಳ್ಳಿಯ ಆಯುರ್ವೇದ ಮಹಾವಿದ್ಯಾಲಯದ ಉಪಪ್ರಾಚಾರ್ಯ ಮತ್ತು ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯ ಡಾ. ಜೆ. ಆರ್. ಜೋಶಿ ಮಾತನಾಡಿ, ಬಿ.ಎಲ್.ಡಿ.ಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ ರಾಜ್ಯದ ಅತೀ ಹಳೆಯ 4ನೇ ಮಹಾವಿದ್ಯಾಲಯವಾಗಿದೆ. 1991 ರಲ್ಲಿ ಇದೇ ಮಹಾವಿದ್ಯಾಲಯದಲ್ಲಿ ಅಧ್ಯಯನ ಮಾಡಿ ಪ್ರಥಮ ಶ್ರೇಣಿಯಲ್ಲಿ ಪಾಸಾಗಿ ಇಂದು ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಸಿನೆಟ್ ಸದಸ್ಯರಾಗಿ ಕಾರ್ಯ ನಿರ್ವಹಿಸಲು ಹೆಮ್ಮೆ ಎನಿಸುತ್ತಿದೆ. ನನ್ನ ಮಾತೃಸಂಸ್ಥೆಯಲ್ಲಿ ಈಗ ಓದುತ್ತಿರುವ ವಿದ್ಯಾರ್ಥಿಗಳು ಮತ್ತು ಈಗ ಪದವಿ ಪಡೆದಿರುವ ವೈದ್ಯರು ಸಮಾಜದಲ್ಲಿ ಉತ್ತಮ ಆರೋಗ್ಯ ಒದಗಿಸಲು ಮತ್ತು ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡಲು ಶ್ರಮಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಎಎಂ-ಎಸ್ ಅಂತಿಮ ವರ್ಷದ ಪದವಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿನಿಯರಾದ ಕಸ್ತೂರಿ ಹೀರೆಮಠ ಮತ್ತು ನಂದಾ ಕುರಿ ಅವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಈ ಘಟಿ-ಕೋತ್ಸವದಲ್ಲಿ ಒಟ್ಟು 44 ಪದವಿ ಮತ್ತು 4 ಸ್ನಾತಕೋತ್ತರ ಪದವಿ ಪ್ರಧಾನ ಮಾಡಲಾಯಿತು.

ಡಾ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಸಂಜಯ ಕಡ್ಲಿಮಟ್ಟಿ, ಉಪಪ್ರಾಚಾರ್ಯ ಡಾ. ಶಶಿಧರ ನಾಯಕ ಮುಂತಾದವರು ಉಪಸ್ಥಿತರಿದ್ದರು.

ಪ್ರಾಧ್ಯಾಪಕ ಡಾ. ಎಂ. ಎಚ್. ಬಿರಾದಾರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸುಸ್ಮಿತಾ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಡಾ. ಪ್ರಸಾದಶಕ್ತಿ ಗೆಣ್ಣೂರ ವಂದಿಸಿದರು

### ಸಿಂದಗಿಯಲ್ಲಿ ಕಸಾಪ ಜಿಲ್ಲಾಧ್ಯಕ್ಷ ಹಾಸೀಂಪೀರ ವಾಲೀಕಾರ ಮನವಿ

# ಡಿ.30-31 ರ ಜಿಲ್ಲಾ ಮಹಿಳಾ ಸಾಹಿತ್ಯ ಸಮ್ಮೇಳನ ಯಶಸ್ವಿಗೊಳಿಸಿ

**ಉದಯರಶ್ಮಿ ನ್ಯೂಸ್**

ಸಿಂದಗಿ: ಗ್ರಾಮೀಣ ಬಾಗದ ಸೂಕ್ತ ಪ್ರತಿಭೆಗಳನ್ನು ಹೊರತರುವ ನಿಟ್ಟಿನಲ್ಲಿ ವಿಜಯಪುರದ ಇದೇ 30 ಮತ್ತು 31 ರಂದು ವಿಜಯಪುರದ ಕಂದಕಲ್ ಹಣಮಂತ್ರಾಯ ರಂಗ ಮಂದಿರದಲ್ಲಿ ಜಿಲ್ಲಾ ಮಹಿಳಾ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಈ ತಾಲೂಕಿನ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಿ ಎಂದು ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಹಾಸೀಂಪೀರ ವಾಲೀಕಾರ ಮನವಿ ಮಾಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಪೂರ್ವಭಾವಿಯಾಗಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸಾಹಿತ್ಯ ಪರಿಷತ್ತು ಬರೀ ಹಾಸೀಂಪೀರ ವಾಲೀಕಾರ ಹಾಗೂ ಕೆಲ ತಾಲೂಕು ಅದ್ಯಕ್ಷರ ಸ್ವತ್ತಲ್ಲ. ಅದು ಎಲ್ಲ ಕನ್ನಡಿಗರ ಸೊತ್ತು ಅದು ಎಲ್ಲರ ಮನೆಗಂಳದಲ್ಲಿ ಎಲ್ಲ ಮನದಲ್ಲಿ ಪ್ರಜ್ವಲಿಸಬೇಕು ಅಂತೆಯೇ ಸಾಹಿತ್ಯ ಪರಿಷತ್ತಿನ ಉದ್ದೇಶವಾಗಿದೆ. ಹಿಂದಿನ ಅಧ್ಯಕ್ಷರ ಕೆಲಸದ ಒತ್ತಡದ ಮಧ್ಯದಲ್ಲಿ ಕಳೆದ 2 ವರ್ಷಗಳಿಂದ ಸಿಂದಗಿಯಲ್ಲಿ ಸಾಹಿತ್ಯ ಚಟುವಟಿಕೆಗಳಲ್ಲಿ ಕೊರತೆ ಉಂಟಾಗಿತ್ತು. ಅವುಗಳನ್ನು ಚುರುಕುಗೊಳಿಸಲು ನೂತನ ಅದ್ಯಕ್ಷ ಶಿವಾನಂದ ಬಡಾನೂರ ಅವರನ್ನು ನೇಮಕ ಮಾಡಲಾಗಿದೆ. ಜ.10ರ ಒಳಗಾಗಿ ಸಿಂದಗಿ ತಾಲೂಕು ಸಮ್ಮೇಳನ ಹಮ್ಮಿಕೊಳ್ಳುವ ಪ್ರಯತ್ನ ನಮ್ಮದಾಗಿದೆ ಎಂದು ತಿಳಿಸಿದ ಅವರು, ಸಿಂದಗಿ-ಇಂಡಿ ಭಾಗದಲ್ಲಿ ಮಹಿಳಾ ಜನಪದ ಸಾಹಿತಿಗಳು, ಸಾಂಸ್ಕೃತಿ-ಕ ಕಲಾವಿದರು, ಕವಿಯತ್ರಿಯರು ಹೆಚ್ಚಿನ ಪ್ರಮಾಣದಲ್ಲಿದ್ದು ಸಾಹಿತ್ಯ ಕೃಷಿ ಹೊರಬರಲು ಅವರಿಗೆ ವೇದಿಕೆ ಕೊರತೆಯಿದೆ. ಮುಂದಿನ ದಿನಮಾನಗಳಲ್ಲಿ ವೇದಿಕೆ ಕಲ್ಪಿಸಿಕೊಡುವ ಕೆಲಸ ಸಾಹಿತ್ಯ ಪರಿಷತ್ತು ಪ್ರಯತ್ನಿಸುತ್ತದೆ. ಈ ಜಿಲ್ಲಾ ಸಮ್ಮೇಳನದಲ್ಲಿ ಸ್ಥಳಿಯ-ರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಆಸಕ್ತರು ಹೆಸರುಗಳನ್ನು ಸೂಚಿಸಿದರೆ ಅವರಲ್ಲಿರುವ ಸೂಕ್ತ ಪ್ರತಿಭೆಗಳನ್ನು ಅನಾವರಣಗೊಳಿಸಲು ವೇದಿಕೆ ಕಲ್ಪಿಸಿಕೊಡಲಾಗುವುದು. ಇದು ಮಹಿಳೆಯರ ಕಾರ್ಯಕ್ರಮವಾಗಿದ್ದು ಶಾಸಕರು, ಸಚಿವರನ್ನು ಹೊರತು ಪಡಿಸಿದರೆ ಎಲ್ಲರೂ ಮಹಿಳೆಯರೇ ವೇದಿಕೆ ಮೇಲಿರುತ್ತಾರೆ. ಈ ಸಮ್ಮೇಳನದಲ್ಲಿ ಉಳಿದುಕೊಂಡ ಮಹಿಳಾ ಸಾಹಿತಿಗಳಿಗೆ ಮತ್ತೊಂದು ವೇದಿಕೆ ಕಲ್ಪಿಸೋಣ. ಸರ್ವಾಧ್ಯಕ್ಷರ ಆಯ್ಕೆಯಲ್ಲಿ ಜಿಲ್ಲೆಯ ಮಹಿಳಾ ಸಾಹಿತಿಗಳ ಹೆಸರುಗಳನ್ನು ಗುರುತಿಸಿ ಆಯ್ಕೆ ಮಾಡಲಾಗುವುದು. ಅದಕ್ಕೆ ಜಿಲ್ಲೆಯ ಎಲ್ಲ ಮಹಿಳಾ ಮಣಿಗಳ ಸಹಕಾರ ಮುಖ್ಯ. ಈ ಸಮ್ಮೇಳನವು ಅರ್ಥಪೂರ್ಣ ಹಾಗೂ ರಾಜ್ಯಕ್ಕೆ ಮಾದರಿಯಾಗಬೇಕು ಎಂದರು.



ಶಿಕ್ಷಕಿ ಶೋಬಾ ಚಿಗರಿ ಮಾತನಾಡಿ, ಇದು ಮಹಿಳೆಯರ ಕಾರ್ಯಕ್ರಮವಿದ್ದು, ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಕಾರ್ಯಕ್ರಮ ಜರುಗಲು ಎಲ್ಲರೂ ತನು ಮನ ಧನದಿಂದ ಸಹಕಾರ ನೀಡಿದಾಗ ಮಾತ್ರ ಯಶಸ್ವಿ ಕಾಣಲು ಸಾಧ್ಯ. ತಾಲೂಕಿನಿಂದ ಮಹಿಳೆಯರನ್ನು ಕರೆತರುವ ಕಾರ್ಯ ಮಾಡುವುದಾಗಿ ಹೇಳಿ ವೈಯಕ್ತಿಕವಾಗಿ ರೂ 10 ಸಾವಿರ ನೀಡುವ ವಾಗ್ದಾನ ಮಾಡಿದರು.

ಈ ಸಂದರ್ಭದಲ್ಲಿ ಶೈನಾಬಿ ಮಸಳಿ, ಮಹಾನಂದ ಬಮ್ಮಣ್ಣಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಗೋಲ್ಲಾಳಪ್ಪಗೌಡ ಪಾಟೀಲ ಗೊಲಗೇರಿ, ಎಂ.ಎ.ಖತೀಬ, ಶಿಲ್ಪಾ ಕುದರಗೊಂಡ, ಕಸಾಪ ತಾಲೂಕಾಧ್ಯಕ್ಷ ಶಿವಾನಂದ ಬಡಾನೂರ, ಚಂದ್ರಶೇಖರ ನಾಗರಬೆಟ್ಟ, ಮಲ್ಲನಗೌಡ ಪಾಟೀಲ ಇಬ್ರಾಹಿಂಪೂರ, ಸಂಗನಗೌಡ ಪಾಟೀಲ ಅಗಸಬಾಳ, ಸುನಂದಾ ಯಂಪೂರೆ, ಎಸ್.ಬಿ. ಚೌಧರಿ, ವರ್ಷಾ ಪಾಟೀಲ, ಜಯಶ್ರೀ ಹದನೂರ, ಶಶಿಕಲಾ ಅಂಗಡಿ, ಬಸಮ್ಮ ನಾಗರಳ್ಳಿ, ನೀಲಾಂಬಿಕೆ ಶಿವಶಿಂಪಿ, ನೀಲಮ್ಮ ಬಡಿಗೇರ, ಸವಿತಾ ಕಲಬುರ್ಗಿ, ರೂಪಾ ಗಿರಣ ಸೇರಿದಂತೆ ಅನೇಕರಿದ್ದರು.

# ಅಂಗನವಾಡಿ ಕೇಂದ್ರಗಳಲ್ಲಿ ಪಾಲಕರ ಸಭೆ 49221 ಪಾಲಕರು ಭಾಗಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲೆಯ 2755 ವಿವಿಧ ಅಂಗನವಾಡಿಗಳಲ್ಲಿ ಡಿ.16 ರಂದು ಪಾಲಕರ ಸಭೆ ಜರುಗಿದ್ದು, ಈ ಸಭೆಯಲ್ಲಿ ಅಂಗನವಾಡಿಗಳಲ್ಲಿ ದಾಖಲಾದ 2,20,327 ಮಕ್ಕಳ ಪಾಲಕರಲ್ಲಿ 49221 ಪಾಲಕರು ವಿವಿಧ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು ಎಂದು ಮಹಿಳಾ

ಭಾರತ ಸರ್ಕಾರವು ಕೌಟುಂಬಿಕ ಹಿಂಸೆಯಿಂದ ಮಹಿಳೆಯರನ್ನು ಹೊರತರಲು ಮಹಿಳಾ ಸಂರಕ್ಷಣಾ ಅಧಿನಿಯಮ 2005 ಹಾಗೂ ನಿಯಮ 2006ನ್ನು ಅಕ್ಟೋಬರ್ 26 ರಿಂದ ಜಾರಿಗೆ ತಂದಿರುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಕಾಯ್ದೆಯನ್ನು ಜೂನ್ 2007 ರಿಂದ ಅನುಷ್ಠಾಗೊಳಿಸಲಾಗುತ್ತಿದೆ ಎಂದು

ಸಭೆ ಹಮ್ಮಿಕೊಳ್ಳಲಾಗುತ್ತಿದೆ. 2755 ಅಂಗನವಾಡಿ ಕೇಂದ್ರಗಳಲ್ಲಿ ಪಾಲಕರ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು, ಇಂದಿನ ಪಾಲಕರ ಸಭೆಯಲ್ಲಿ 49,221 ಮಕ್ಕಳ ಪಾಲಕರು, ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿ ಪಾಲಕರ ಸಭೆಯನ್ನು ಯಶಸ್ವಿಗೊಳಿಸಿದ್ದಾರೆ. ಪಾಲಕರ ಸಭೆಯ ಪರಿಣಾಮ ಎಲ್ಲ ಅಂಗನವಾಡಿ ಕೇಂದ್ರದಲ್ಲಿ ಸಕಾರಾತ್ಮಕ



ಮೇಲೆ ದುಷ್ಪರಿಣಾ ಬೀಳುವುದ-ರಿಂದ ಮಕ್ಕಳ ಪೋಷಣೆಯಲ್ಲಿ ಜಾಗೃತರಾಗಿರಬೇಕು ಎಂದು ಕಿವಿಮಾತು ಹೇಳಿದರು.

ಮಹಿಳೆಯರಿಗೆ ಉಚಿತವಾಗಿ ಸಿಗುವ ಕಾನೂನು ಸೇವೆಗಳ ಬಗ್ಗೆ ಹಾಗೂ ಕೌಟುಂಬಿಕ ದೌರ್ಜನ್ಯದಡಿಯಲ್ಲಿ ಪ್ರಕರಣ ದಾಖಲು ಮಾಡುವುದರ ಬಗ್ಗೆ ಸವಿವರವಾಗಿ ತಿಳಿಸಿದ ಅವರು, ಸಂವಿಧಾನದಲ್ಲಿ ಖಾತ್ರಿಪಡಿಸಿರುವ ಮಹಿಳೆಯರ ಹಕ್ಕುಗಳನ್ನು ಹೆಚ್ಚು ಪರಿಣಾಮಕಾ-ರಿಯಾಗಿ ರಕ್ಷಣೆ ಮಾಡುವುದು ಈ ಕಾಯ್ದೆಯ ಉದ್ದೇಶವಾಗಿದೆ. ಕುಟುಂಬದೊಳಗಾಗುವ ಯಾವುದೇ ಬಗೆಯ ಹಿಂಸೆಗೊಳಗಾದ ಮಹಿಳೆಯರಿಗೆ ಸಂಬಂಧಿಸಿದಂತೆ ಹೆಚ್ಚು ಪರಿಣಾಮಕಾರಿಯಾದ ಸಂರಕ್ಷಣೆ ಒದಗಿಸುವುದಕ್ಕಾಗಿ ಕರೆಗಳನ್ನು ತಾಲ್ಲೂಕು ಸಂರಕ್ಷಣಾಧಿಕಾ-ರಿಗಳಿಗೆ, ಸಮಾಲೋಚನಾ ಕರೆಗಳನ್ನು ಸಖಿ ಕೇಂದ್ರಗಳಿಗೆ ಮತ್ತು ಸಾಂತ್ವನ ಕೇಂದ್ರಗಳಿಗೆ, ತಾತ್ಕಾಲಿಕ ಆಶ್ರಯ ಬಯಸುವ ಕರೆಗಳನ್ನು ಸ್ವಾಧಾರ ಗೃಹಗಳಿಗೆ, ಬಾಲ್ಯ ವಿವಾಹಕ್ಕೆ ಸಂಬಂಧಿಸಿದ ಕರೆಗಳನ್ನು ಬಾಲ್ಯ ವಿವಾಹ ನಿಷೇದಾಧಿಕಾರಿಗಳಿಗೆ ವರ್ಗಾಯಿಸಿ ಸೇವೆಯನ್ನು ಒದಗಿಸಲಾಗುತ್ತಿದೆ ಎಂದರು.

ಸಿಂದಗಿ ತಾಲೂಕಿನ ಕನ್ನೋಳಿ ಅಂಗನವಾಡಿ ಕೇಂದ್ರದ ಪಾಲಕರ ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಕೆ.ಕೆ.ಚವ್ಹಾಣ ಅವರು ಭಾಗವಹಿಸಿ ಮಾತನಾಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ನಿರ್ದೇಶನದಂತೆ ಪ್ರತಿ ಮಾಹೆ ಪಾಲಕರ

ಆದ್ಯತೆ ನೀಡುವುದು ಬಾಲ್ಯ ವಿವಾಹ ತಡೆಗಟ್ಟುವುದರ ಕುರಿತು, ಕೌಟುಂಬಿಕ ದೌರ್ಜನ್ಯದಡಿ ಕಾನೂನು ಅರಿವು ಕಾರ್ಯಕ್ರಮದ ಬಗ್ಗೆ, ಮಕ್ಕಳ ಹಕ್ಕು ಮತ್ತು ರಕ್ಷಣೆ ಬಗ್ಗೆ, ಗರ್ಬಿಣಿ-ಬಾಣಂತಿ ಮಕ್ಕಳಲ್ಲಿ ರಕ್ತ ಹೀನತೆ ತಡೆಗಟ್ಟುವ ಬಗ್ಗೆ, ಅಪೌಷ್ಠಿಕತೆ ನಿವಾರಣೆ, ಗರ್ಭಿಣಿ ಮಹಿಳೆಗೆ ಮತ್ತು ಮಕ್ಕಳಿಗೆ ಸರಿಯಾದ ಸಮಯಕ್ಕೆ ಚುಚ್ಚುಮದ್ದು ಹಾಕಿಸುವ ಕುರಿತು, ತಾಯಿ ಮತ್ತು ಮಗುವಿನ ಮರಣ ತಪ್ಪಿಸುವುದರ ಬಗ್ಗೆ , 3 ರಿಂದ 6 ವರ್ಷದ ಮಕ್ಕಳಿಗಾಗಿ ಸರಕಾರದಿಂದ ಸಿಗುವ ಸೌಲಭ್ಯಗಳ ಕುರಿತು ಭಾಗ್ಯಲಕ್ಷ್ಮೀ, ಪ್ರಧಾನಮಂತ್ರಿ ಮಾತೃವಂದನಾ ಯೋಜನೆ ಸೇರಿ ಇಲಾಖೆ ಹಾಗೂ ಸರಕಾರದ ವಿವಿಧ ಯೋಜನೆಗಳ ಮಾಹಿತಿಯನ್ನು ವಿನಿಮಯ ಮಾಡಕೊಳ್ಳಲಾಯಿತು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಗಣಿತ ವಿಷಯ ಫೋನ್ ಇನ್ ಕಾರ್ಯಕ್ರಮ ಯಶಸ್ವಿ

# ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡ ವಿದ್ಯಾರ್ಥಿಗಳು

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗಾಗಿ ಗಣಿತ ವಿಷಯದ ಕುರಿತಾಗಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ನಡೆದ ಫೋನ್ ಇನ್ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಯಿತು ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕ ಎನ್.ಎಚ್.ನಾಗೂರ ಅವರು ತಿಳಿಸಿದ್ದಾರೆ.

ಡಿ.15ರಂದು ವಿಜಯಪುರದ ಉರ್ದು ಶಿಕ್ಷಕರ ತರಬೇತಿ ಸಂಸ್ಥೆಯ ಸಭಾಭವನದಲ್ಲಿ ಸಂಜೆ 6 ರಿಂದ ರಾತ್ರಿ 8 ಗಂಟೆಯವರೆಗೆ ನಡೆದ ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಹತ್ತನೇ ತರಗತಿ ವಿದ್ಯಾರ್ಥಿಗಳು ಕೆಲವು ಸಮಸ್ಯೆಗಳು, ವಿಷಯದ ಗೊಂದಲಗಳಿಗೆ ವಿಷಯ ತಜ್ಞ ಶಿಕ್ಷಕರಿಂದ ಪ್ರಶ್ನೆ ಕೇಳಿ ತಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಂಡರು. ಜಿಲ್ಲೆಯ 273 ವಿದ್ಯಾರ್ಥಿಗಳಿಂದ 429 ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಲಾಯಿತು.

ಫೋನ್ ಇನ್ ಕಾರ್ಯಕ್ರಮದಲ್ಲಿ ವಿವಿಧ ವಿದ್ಯಾರ್ಥಿಗಳಿಂದ ಕೇಳಲಾದ ಬಹುಪದೋಕ್ತಿ ಎಂದರೇನು?, ಹೆಚ್ಚು ಅಂಕಗಳನ್ನು ಗಳಿಸುವುದು ಹೇಗೆ?, ವೃತ್ತಗಳು ಬಗ್ಗೆ ತಿಳಿಸಿರಿ. ಅನ್ವಯಿಕ ಪ್ರಶ್ನೆಗಳನ್ನು ಹೇಗೆ ಬಿಡಿಸುವುದು?, ಯಾವ ಯಾವ ಅಧ್ಯಾಯದಲ್ಲಿ ಎಷ್ಟು ಅಂಕಗಳ ಪ್ರಶ್ನೆ ಬರುವವು? ಶ್ರೀಧರನ ಸೂತ್ರ, ಸಂಖ್ಯಾಶಾಸ್ತ್ರ ಹೇಗೆ ಬಿಡಿಸುವುದು? ಶ್ರೇಢಿ ಯಲ್ಲಿ ಅನ್ವಯಿಕ



ಪ್ರಶ್ನೆಗಳನ್ನು ಕೇಳುವರೇ? ಟಿನೇ ಪದೇ ಎಂದರೇನು?ಎರಡು ಪದಗಳು ಹೋಲಿಕೆ ಮಾಡುವುದು ಹೇಗೆ? ಹೆಚ್ಚು ಅಂಕಗಳನ್ನು ಗಳಿಸುವುದು ಹೇಗೆ? ಮನೆಯಲ್ಲಿ ಕಲಿಕಾ ಸಮಯ ಹೇಗೆ ಹೊಂದಾಣಿಕೆ ಮಾಡಿಕೊಂಡು ಕಲಿಯಬೇಕು?, ಪರೀಕ್ಷೆ ಹತ್ತಿರ ಬರುತ್ತಿದ್ದಂತೆ ಭಯ ಆಗುತ್ತಿದೆ ಏನು ಮಾಡಬೇಕು?, ಪರೀಕ್ಷೆಗೆ ಬರಲಿರುವ ಪ್ರಮುಖ ಪ್ರಮೇಯಗಳು ಯಾವುವು? ಮನೆಯಲ್ಲಿ ಲೆಕ್ಕ ಮಾಡಲು ಕುಳಿತಿರುವೆ ಬರುತ್ತವೆ, ಪರೀಕ್ಷೆಯಲ್ಲಿ ಅದೇ ಪ್ರಶ್ನೆಗೆ ಉತ್ತರ ಬರುವುದಿಲ್ಲ ಯಾಕೆ? ಹೀಗೆ ಹಲವು ಪ್ರಶ್ನೆಗಳು ಕೇಳಿ ಬಂದವು.

ಗಣಿತ ವಿಷಯದ ಸಂಪನ್ಮೂಲ ಶಿಕ್ಷಕರಾಗಿ ಕೆ.ಎಸ್.ಚನ್ನವೀರ, ಎಂ.ಎಂ.ಬಿರಾದಾರ. ಪಿ.ಎಸ್.ಮರಗಟ್ಟಿ. ಎಸ್.ವ್ಹಿ. ಬುರ್ಲಿ, ರವೀಂದ್ರ ಬೆನ್ನೂರ, ಪ್ರಕಾಶ್ ಬಿರಾದಾರ, ಎಸ್.ಬಿ.ನಾಗರಾಳ, ಅಶೋಕ ಗುಂಡಳ್ಳಿ, ಎಂ.ಜಿ.ಕುಲಕರ್ಣಿ, ಅಜಿತ್ ಜೋಷಿ, ಶ್ರೀಮತಿ ಬಿ.ಎಸ್.ಬೆಳ್ಳುಂಡಗಿ, ಶ್ರೀಮತಿ ಲತಾ ಜೋಷಿ 13 ಜನ ಶಿಕ್ಷಕರು ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದರು.

ಕಾರ್ಯಕ್ರಮದಲ್ಲಿ ಬಿಇಓ ಶ್ರೀಮತಿ ಪ್ರಮೋದಿನಿ ಬಳೂಲಮಟ್ಟಿ ಮತ್ತು ಗಣಿತ ವಿಷಯ ಪರಿವೀಕ್ಷರಾದ ಸಿ.ಎಚ್.ಬಿರಾದಾರ, ಎಸ್.ಎಸ್ ತಳ್ಳೊಳ್ಳಿ, ಸಿ.ಎಚ್. ಬಿರಾದಾರ, ಸಮಾಜ ವಿಜ್ಞಾನ ವಿಷಯ ಪರಿವೀಕ್ಷಕರಾದ ಶ್ರೀಮತಿ ಶೈಲಾ ಹಳೆಮನಿ, ಉರ್ದು ಶಿಕ್ಷಣ ಸಂಂ-ಯೋಜಕರಾದ ಝಡ್.ಎ.ಸತಾರೇಕರ ಸೇರಿದಂತೆ ಶಿಕ್ಷಕರು ಉಪಸ್ಥಿತರಿದ್ದರು.

# ಸ್ವಯಂ ಸೇವಾ ಸಂಸ್ಥೆಯಿಂದ ವಸತಿರಹಿತರ ಸಮೀಕ್ಷೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ವಿಜಯಪುರ ನಗರ ವ್ಯಾಪ್ತಿಯಲ್ಲಿನ ನಗರ ವಸತಿ ರಹಿತರನ್ನು ಗುರುತಿಸಲು ಸ್ವಯಂ ಸೇವಾ ಸಂಸ್ಥೆಯಿಂದ ಡಿ.15 ರಿಂದ 31ರವರೆಗೆ ಎರಡು ದಿನಕ್ಕೊಮ್ಮೆ ವಸತಿ ರಹಿತರನ್ನು ಗುರುತಿಸಲು ರ್‍ಯಾಪಿಡ್ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ ಎಂದು ಮಹಾನಗರ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

ಸಮೀಕ್ಷೆ ಅವಧಿಯಲ್ಲಿ ಸಾರ್ವಜನಿಕರಿಗೆ ನಗರ ವ್ಯಾಪ್ತಿಯಲ್ಲಿ ಯಾರಾದರೂ ವಸತಿ ರಹಿತರು ಕಂಡು ಬಂದಲ್ಲಿ ಕಾರ್ಯದರ್ಶಿ ಕರ್ನಾಟಕ ಹ್ಯೂಮನ್ ವೆಲ್ಫೇರ್ & ಜನಾಭಿವೃದ್ಧಿ ಸೊಸಾಯಿಟಿ (ರಿ) ವಿಜಯಪುರ ಇವರ ಮೊ: 7411901275 ಸಂಖ್ಯೆಗೆ ಸಂಪರ್ಕಿಸುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಡಿ.17ರ ಪ್ರತಿಭಟನೆಗೆ ಬೆಂಬಲಿಸಲು ಡಾ.ವಿಷ್ಣುವರ್ಧನ್ ಅಭಿಮಾನಿಗಳ ಬೆಂಗಳೂರು ಪಯಣ

# ವಿಷ್ಣು ಪುಣ್ಯಭೂಮಿ ಬಿಡಲಾರೆವು :ಕಣಕಾಲ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಸಾಹಸಸಿಂಹ ಡಾ.ವಿಷ್ಣುವರ್ಧನ್ ಅವರ ಅಭಿಮಾನಿಗಳ ಒಕ್ಕೂಟ ಡಿ.17 ರಂದು ಬೆಂಗಳೂರಿನ ಸ್ವಾತಂತ್ರ ಉದ್ಯಾನವನದಲ್ಲಿ ನಡೆಸುತ್ತಿರುವ ಪ್ರತಿಭಟನೆಗೆ ತಾಲೂಕಿನ ವಿಷ್ಣು ಅಭಿಮಾನಿಗಳು ಬೆಂಬಲ ಸೂಚಿಸಲು ಶನಿವಾರ ರಾತ್ರಿ ಇಲ್ಲಿನ ವಿಬಿಸಿ ಹೈಸ್ಕೂಲ್ ಮೈದಾನದಿಂದ ಬಸ್ ಮೂಲಕ ತೆರಳಿದರು.

ಈ ವೇಳೆ ಮಾತನಾಡಿದ ಅಭಿಮಾನಿಗಳ ಮುಖಂಡ ಶಿವು ಕಣಕಾಲ, ವಿಷ್ಣು ನಮ್ಮನ್ನು ಅಗಲಿ 14 ವರ್ಷಗಳು ಗತಿಸಿವೆ. ಇಷ್ಟು ವರ್ಷಗಳ ಕಾಲ ಅವರ ಪುಣ್ಯಭೂಮಿಯನ್ನು ನಿರ್ಲಕ್ಷಿಸಿರುವದು ನಮ್ಮ ಆಕ್ರೋಷಕ್ಕೆ ಕಾರಣವಾಗಿದೆ. ಪುಣ್ಯಭೂಮಿಗಾಗಿ ಡಿ.17 ರಂದು ರಾಜ್ಯದಾದ್ಯಂತ ಅಪಾರ ವಿಷ್ಣು ಅಭಿಮಾನಿಗಳು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸುತ್ತಿದ್ದು ನಾವೂ ಕೂಡ ಭಾಗಿಯಾಗುತ್ತಿದ್ದೇವೆ. ಯಾವುದೇ ಕಾರಣಕ್ಕೂ ವಿಷ್ಣು ಪುಣ್ಯಭೂಮಿಯನ್ನು ಬಿಡಲು ಸಿದ್ಧರಿಲ್ಲ ಎಂದರು.



ಜಿ.ಪಂ ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ ಮಾತನಾಡಿ, ಇಲ್ಲಿಂದ ಬೆಂಗಳೂರಿನವರೆಗೆ ಪುಣ್ಯಭೂಮಿಗಾಗಿ ಹೋರಾಟಕ್ಕೆ ತೆರಳುತ್ತಿರುವ ನಿಮ್ಮ ಅಭಿಮಾನಕ್ಕೆ ಸಾಟಿ ಬೇರೊಂದಿಲ್ಲ. ಹೋರಾಟಕ್ಕೆ ತೆರಳುವ ವಾಹನಕ್ಕೆ ಶ್ರೀಗಳು ಚಾಲನೆ ನೀಡಿದ್ದಾರೆ ಅಂದರೆ ನಿಮ್ಮ ಹೋರಾಟಕ್ಕೆ ಜಯ ಸಿಕ್ಕಂತೆ ಎಂದರು.

ಅಂದಾಜು 35 ಅಭಿಮಾನಿಗಳನ್ನೊಳಗೊಂಡ ಬಸ್ ಗೆ ಧಾರವಾಡದ ಉಪ್ಪಿನ ಬೆಟಗೇರಿಯ ಪೂಜ್ಯ ವಿರೂಪಾಕ್ಷ ಮಹಾಸ್ವಾಮಿಗಳು ಚಾಲನೆ ನೀಡಿದರು. ಈ ವೇಳೆ ತಂಗಡಗಿಯ ಹಡಪದ ಅಪ್ಪಣ್ಣ ಶ್ರೀಗಳು, ಮುಖಂಡ ವಾಯ್.ಎಚ್.ವಿಜಯಕರ, ಪುರಸಭೆ ಮಾಜಿ ಸದಸ್ಯ ಕಾಮರಾಜ ಬಿರಾದಾರ, ನಿವೃತ್ತ ಯೋಧರ ಸಂಘದ ಅಧ್ಯಕ್ಷ ಐ.ಆರ್.ಹಿರೇಮಠ, ಹರೀಶ ಬೆವೂರ, ಮೌನೇಶ ಬಡಿಗೇರ, ಸಂಜು ಕಡೂರ, ರಾಜು ಮಡಿವಾಳರ, ಸೋಮಶೇಖರ ಹಿರೇಮಠ, ಶಿವು ತಾರನಾಳ, ಸಂಗಮೇಶ ಕತ್ತಿ, ಮಲ್ಲಿಕಾರ್ಜುನ ತಾರನಾಳ, ಮಂಜುನಾಥ ಹುನಕುಂಟಿ, ಭೀಮಣ್ಣ ಹಗಟಗಿ, ನಾಗಭೂಷಣ ಭೋವಿ, ಬಸವರಾಜ ಹೊಸಮನಿ, ದಿಲೀಪ ಧನಗೊಂಡ, ಮಹೇಶ ಮುರಾಳ, ಪರಸು ದಳವಾಯಿ, ಧರೆಪ್ಪ ಕುಂಬಾರ, ಸೇರಿದಂತೆ ಮತ್ತೀತರರು ಇದ್ದರು.

## ವಿಜಯಪುರದಲ್ಲಿ ಜನಪರ ಉತ್ಸವಕ್ಕೆ ಚಾಲನೆ ನೀಡಿದ ಸಚಿವ ಎಂ.ಬಿ.ಪಾಟೀಲ ಅಭಿಮತ

# ಜನಪದ ಕಲೆಗಳು ಗ್ರಾಮೀಣ ಭಾರತದ ಜೀವಾಳ

**ಉದಯರಶ್ಮಿ ನ್ಯೂಸ್**

ವಿಜಯಪುರ: ಭವ್ಯವಾದ ಇತಿಹಾಸ ಹೊಂದಿದ ನಮ್ಮ ಸಂಸ್ಕೃತಿ ಹಾಗೂ ಕಲೆಗಳಿಗೆ ಪ್ರೋತ್ಸಾಹ ಹಾಗೂ ಉತ್ತೇಜನ ನೀಡುವ ನಿಟ್ಟಿನಲ್ಲಿ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಖಾತೆ ಸಚಿವ ಡಾ.ಎಂ.ಬಿ.ಪಾಟೀಲ ಅವರು ಹೇಳಿದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದ ಆವರಣದಲ್ಲಿ ಶನಿವಾರ ಸಂಜೆ ಹಮ್ಮಿಕೊಂಡ ಜನಪರ ಉತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತ ದೇಶದ ಭವ್ಯವಾದ ಇತಿಹಾಸ, ಪರಂಪರೆ ಸಂಸ್ಕೃತಿಯನ್ನು ಅವಲೋಕಿಸಿದಾಗ ನಮ್ಮಲ್ಲಿರುವಂತಹ ಜಾನಪದ ಕಲೆ, ಸಂಗೀತ, ನಾಟಕ, ತನ್ನದೇ ಆದ ಸ್ಥಾನ ಹಾಗೂ ವಿಶಿಷ್ಠತೆಯನ್ನು ಪಡೆದುಕೊಂಡಿವೆ. ಪ್ರತಿಬಿಂಬವಾಗಿರುವ ಜನಪದ ಕಲೆಗಳು, ಜನಜೀವನದ ಹಾಸು ಹೊಕ್ಕಾಗಿರುವ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವ ಕಲೆಗಳು ಗ್ರಾಮೀಣ ಭಾರತದ ಜೀವಾಳವಾಗಿವೆ. ಪ್ರತಿ ರಾಜ್ಯದಲ್ಲಿ ತಮ್ಮದೇ ವಿಭಿನ್ನವಾದ ಕಲೆ ಮತ್ತು ಸಂಸ್ಕೃತಿ ಇದೆ. ಸಾವಿರಾರು ವರ್ಷಗಳಿಂದ ಬಂದ ಈ ಜಾನಪದ ಕಲೆಗಳನ್ನು ಸಂರಕ್ಷಿಸಿ, ಬೆಳೆಸುವ ಗುರುತರ ಜವಾಬ್ದಾರಿ ನಮ್ಮ ಮೇಲಿದೆ. ಜಾನಪದ ಕಲೆಗಳನ್ನು ಸಂರಕ್ಷಿಸಿ, ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ಈ ಕಲೆಗಳನ್ನು ಪರಿಚಯಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು.

ಐತಿಹಾಸಿಕ ವಿಜಯಪುರ ನಗರದಲ್ಲಿ ಜನಪರ ಉತ್ಸವವನ್ನು ಆಚರಿಸಲಾಗುತ್ತಿದೆ. ಜನಪದ ಕುರಿತು ಜನರಲ್ಲಿ ಆಸಕ್ತಿ ಮೂಡಿಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಕಲಾವಿದರ ಕಲೆಯನ್ನು ಕಣ್ತುಂಬಿಕೊಂಡು ಸಂತೋಷಪಡುವುದಲ್ಲದೇ, ಜಾನಪದ ಕಲೆಗಳಿಗೆ ಉತ್ತೇಜನ ನೀಡಬೇಕು. ಈ ನಿಟ್ಟಿನಲ್ಲಿ ಸರ್ಕಾರವೂ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾನಪದ ಕಲೆಗಳಿಗೆ ಪ್ರೋತ್ಸಾಹ ನೀಡುತ್ತಿದೆ ಎಂದು ಹೇಳಿದರು.

ನಮ್ಮ ಜಿಲ್ಲೆ ಸಾಂಸ್ಕೃತಿಕವಾಗಿ ಜಾನಪದ ಸೊಗಡನ್ನು ಹೊಂದಿರುವ ಜಿಲ್ಲೆಯಾಗಿದೆ. ಪ್ರತಿ ಗ್ರಾಮದಲ್ಲಿಯೂ ಕಲಾವಿದರಿದ್ದು, ಅವರನ್ನು ಗುರುತಿಸಿ ಜಿಲ್ಲಾ ಮಟ್ಟದ ವೇದಿಕೆಗಳ ಮೂಲಕ ಪರಿಚಯಿಸುವ ಕೆಲಸವಾಗಬೇಕು. ಇಂದಿನ ಯುವ ಪೀಳಿಗೆ ಕೂಡ ಇಂತಹ ಜಾನಪದ ಕಲೆಗಳ ಕಡೆಗೆ ಆಕರ್ಷಿತರಾಗಿ, ಜಾನಪದದ ಸಾರ ಮತ್ತು ಸತ್ವವನ್ನು ಅರಿಯಬೇಕು. ಈ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಪ್ರೇರಕವಾಗಿವೆ. ವಿಜಯಪುರ ನಗರದ ಐತಿಹಾಸಿಕ ತಾಣಗಳಲ್ಲಿ ಜನಪರ ಕಲೆಗಳನ್ನು ಪ್ರೋತ್ಸಾಹಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಕಲೆಗಳ ಸಂರಕ್ಷಣೆಯೊಂದಿಗೆ ಜಿಲ್ಲೆಯ ಪ್ರವಾಸೋದ್ಯಮಕ್ಕೆ ಉತ್ತೇಜನ ದೊರೆಯಲಿರುವುದರಿಂದ ನಿರಂತರವಾಗಿ ಜನಪದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನಪದ ಕಲೆಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಅವಶ್ಯಕತೆ ಇದೆ ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಮಾತನಾಡಿ, ರಾಜ್ಯ ತನ್ನದೇ ಆದ ಸಾಂಸ್ಕೃತಿ-ಕ ಇತಿಹಾಸ ಹೊಂದಿದೆ. ಇಂತಹ ಜಾನಪದ ಕಲೆಗಳ ಅಭ್ಯುದಯಕ್ಕೆ ಈ ಕಾರ್ಯಕ್ರಮಗಳು ವೇದಿಕೆಯಾಗಿವೆ. ಈ ಕುರಿತು ಅರಿವು ಮೂಡಿಸಬೇಕು. ಗ್ರಾಮೀಣ ಕಲೆಗಳ ಪ್ರೋತ್ಸಾಹಕ್ಕೆ ನಿರಂತರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಸಾರ್ವಜನಿಕರು ನಮ್ಮ ಸಂಸ್ಕೃತಿ ಪ್ರತಿಬಿಂಬಿಸುವ ಕಲೆಗಳಿಗೆ ಪ್ರೋತ್ಸಾಹ ನೀಡಬೇಕು. ವಿದ್ಯಾರ್ಥಿಗಳಲ್ಲಿ ನಮ್ಮ ಜಾನಪದ ಕಲೆ ಸಂಸ್ಕೃತಿ ಕುರಿತು ಅರಿವು ಮೂಡಿಸಬೇಕು ಎಂದು ಹೇಳಿದರು

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವನೆ, ರಂಗಭೂಮಿ ಕಲಾವಿದ ಡಿ.ಎಚ್.ಕೊಲ್ಹಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ್, ಜಾನಪದ ಪರಿಷತ್ತಿನ ಖಜಾಂಚಿ ಶಿವಬಸಪ್ಪ ಮೇತ್ರಿ, ಶಹನಾಯಿ ವಾದಕರಾದ ಗಿರಿಮಲ್ಲಪ್ಪ ಭಜಂತ್ರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಇದಕ್ಕೂ ಮೊದಲು ನಗರದ ಶ್ರೀ ಸಿದ್ಧೇಶ್ವರ ದೇವಸ್ಥಾನದಿಂದ ಕಂದಗಲ್ ಹನುಮಂತರಾಯ ರಂಗಮಂದಿರದವರೆಗೆ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ಜರುಗಿತು.

---

## ಒಡಪು : ದುಂಡುಮಲ್ಲಿಗೆ

ಜರತಾರಿ ಸೀರಿ ಕಣ್ಣಿಗೆ ಕಾಡ್ಗಿ
ದುಂಡು ಮಲ್ಲಿಗೆ ಮಾಲಿ ಹಾಕೊಂಡು
ಅಡ್ಡಾಡಿದ್ರ ತಿರುಗಿ ತಿರುಗಿ ನೋಡ್ತಾರೆ
ಗುರುರಾಜರವರು.



–ಮೀನಾಕ್ಷಿ ವಾಲಿ

ಗುಂಡು ಗುಂಡು ನನ್ನೊಳು
ಗುಂಡ್ಗಲ್ಲಿನಂತೊಳು
ದುಂಡು ಮಲ್ಲಿಗೆ ಬಯಸಿ
ದಂಡಾಗಿ ಉಣಿಸ್ಯಾಳ ಗುಂಡಮ್ಮ



– ಕಲ್ಯಾಣ್ ಸಿಂಗ್ ಭೀ ಹಜೇರಿ

ಮನೆಗೆ ಬಂದೆನು ತಡವಾಗಿ
ಕಂಡೆನು ಬಿಗುಮಾನದ ಹೊಗಿ
ಕೈಯಲ್ಲಿ ಕಂಡಳು ದುಂಡು ಮಲ್ಲಿಗಿ
ಅರಳಿತವಳ ತುಟಿಯಂಚಲಿ ಹೂ ನಗಿ



– ವಿ.ಎಚ್.ಕೆ.ಹಿರೇಮಠ.

ನಡೆ ನಡೆ ನೀ ಮೆಲ್ಲಗೆ
ನೀ ನನ್ನ ದುಂಡು ಮಲ್ಲಿಗೆ
ಪ್ರಶಾಂತನ ಸವಿ ನುಡಿಗೆ
ಉಷೆಯಾದಳು ನಾಚಿ ಕೆಂಪಗೆ



– ಉಷಾ ಭಾರದ್ವಾಜ

ಮುಂಜೇಲಿ ಹಾಕ್ತಾರ ಗ್ವಾದಾನ್ಯಾಗ ಮೇವು.
ಸಂಜೀಕ ಇರಾಕಬೇಕ ಚಾ ಜೋಡಿ ಸೇವು.
ಯುಗಾದ್ಯಾಗ ಮಾಡಾಕಾಬೇಕ ಮಾವು ಬೇವು
ಚಂದ್ರಶೇಖರರ ಮನವರಳಲು ಮುಡಿಯಲಿರಬೇಕು
ದುಂಡುಮಲ್ಲಿಗೆ ಹೂವು.



– ಲತಾ ಮಿಥುನ್ ಜೀನಕೇರಿ

ದುಗುಡಗೊಂಡರೆ ಹೋದರಾಯಿತು ಸೀರೆ ಖರೀದಿಗೆ
ಮನವರಳಿ ಮಿಂಚುವುದು ಮೊಗದಲ್ಲಿ ಮುಗುಳು ನಗೆ
ಮುನಿಸಿಕೊಂಡರೆ ಮುಡಿಸಿದರಾಯಿತು ದುಂಡುಮಲ್ಲಿಗೆ
ಮುದಗೊಂಡು ವಿಜಯಲಕ್ಷ್ಮಿ ಬರಸೆಳೆವಳು ಮೆಲ್ಲಗೆ

– –ಡಾ. ವೆಂಕಟಕೃಷ್ಣ ಕೆ.

---

# ಕೊಟ್ಟಿದ್ದು ತನಗೆ

## ಭಾವರಶ್ಮಿ



– –ಸತೀಶಚಂದ್ರ
("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ


ವಿಶಾಲವಾದ ಹಜಾರದಲ್ಲಿ ರಾಯರು ಒಬ್ಬರೇ ಕುಳಿತಿದ್ದರು . ಹಗಲು ಸರಿದು ಕತ್ತಲು ಮುಸುಕುವ ಸಮಯ . ಎದ್ದು ದೀಪ ಮೂಡಿಸಲೂ ಬಾರದ ಮನಸು . ಬೇಸರವೊ ಆಶಕ್ತತೆಯೋ ತಿಳಿಯದು . ಇನ್ನು ಯಾರಿಗಾಗಿ ಈ ಜೀವನ ? ಏತಕ್ಕಾಗಿ ವ್ಯಾಪಾರ, ವೈಭೋಗ ? ಹೌದು , ಸುಶೀಲ ಹೇಳಿದಂತೆ ಮಾಡಬೇಕು . ತಡ ಮಾಡಬಾರದು . ಅವಳ ಆತ್ಮಕ್ಕೆ ಶಾಂತಿ ಸಿಗಬೇಕೆಂದರೆ ಅವಳ ಇಚ್ಛೆಯಂತೆ ನಡೆಯ ಬೇಕು , ಎಂದು ತೀರ್ಮಾನಿಸಿದರು.

ಯಾಕೆ ರಾಯರು ಇನ್ನೂ ದೀಪ ಮೂಡಿಸಿಲ್ಲವಲ್ಲ ?

ಎಂದು ಯೋಚಿಸುತ್ತಾ ಬಂದ ರಾಜಣ್ಣ ; ರಾಯರೇ.....ರಾಯರೇ..ಎಂದು ಕೂಗುತ್ತಾ ಒಳ ಬಂದು ; ಅವನೇ ವಿದ್ಯುತ್ ದೀಪಗಳನ್ನ ಬೆಳಗಿಸಿದ . ಬೆಳಕು ಕಣ್ಣುಗಳನ್ನು ತಟ್ಟಿದಾಗಲೆ ರಾಯರು ಎಚ್ಚೆತ್ತರು .

ಓ....ರಾಜಣ್ಣ ನೀನಾ ? ಯಾವಾಗ ಬಂದೆ ? ನೀ ಬಂದಿದ್ದು ನನಗೆ ಗೊತ್ತಾಗಲೆ ಇಲ್ಲ .

ರಾಯರೆ ನೀವು ಎಷ್ಟು ದಿನ ಹೀಗೇ ಇರುತ್ತೀರಿ ? ವ್ಯಾಪಾರ, ವ್ಯವಹಾರ ಎಲ್ಲಾ ಬಿಟ್ಟು ಹೀಗೇ ಕುಳಿತರೆ



ಮತ್ತೆ ಮತ್ತೆ ಅದೇ ಚಿಂತೆ , ಅದೇ ವೇದನೆ . ಅವ್ವ ಅವರ ವರ್ಷಾಂತಿಕ ಮುಗಿದು ಹದಿನೈದು ದಿನಗಳೇ ಕಳೆದಿವೆ , ಬಂದವರೆಲ್ಲಾ ಹೋಗಿದ್ದಾಗಿದೆ; ಇನ್ನಾದರೂ ನೀವು ಅಡಿಕೆ ಮಂಡಿ ಕಡೆ ಬನ್ನಿ . ಅವರಿವರು , ವ್ಯಾಪಾರಸ್ಥರು , ಹಿತೈಷಿಗಳು ಬರುತ್ತಿರುತ್ತಾರೆ . ಅವರ ಜೊತೆ ಮಾತು, ಕತೆ ನಡೆಸುತ್ತಿದ್ದರೆ ನಿಮ್ಮ ಮನಸೂ ಹಗುರವಾದೀತು !

ಸ್ವಲ್ಪ ಇರು ರಾಜಣ್ಣ ; ಈಗ ಬಂದೆ ಎಂದು ಹೇಳುತ್ತಾ ಒಳನಡೆದ ರಾಯರು , ಕೈ ಕಾಲು ತೊಳೆದುಕೊಂಡು ದೇವರ ಮುಂದೆ ದೀಪ ಹಚ್ಚಿ ಬಂದು ;

ಈಗ ಹೇಳು ರಾಜಣ್ಣ . ಮಂಡಿ ವ್ಯಾಪಾರ ಹೇಗೆ ನಡೆಯುತ್ತಿದೆ ? ಈಗೊಂದು ತಿಂಗಳಿಂದ ನಾ ಆ ಕಡೆ ತಲೆ ಹಾಕಿಲ್ಲ . ಅದು ನಿನಗೂ ತಿಳಿದಿದೆ .

ರಾಯರೇ ಈಗ ಎರಡು ವಾರಗಳಿಂದ ಅಡಿಕೆ ಧಾರಣೆ ಬರೀ ಇಳಿತವೇ ಆಗಿದೆ . ಅವಕ ಕಮ್ಮಿ . ಇದ್ದ ಮಾಲಿಗೆ ಬಿದ್ದು ಹೋಗಿದೆ . ಹೀಗಾದರೆ ಹೇಗೆ ಎಂಬ ಚಿಂತೆ .

ಇರಲಿ ಬಿಡು ರಾಜಣ್ಣ . ಹೇಗಾಗುತ್ತೋ , ಎಷ್ಟಾಗುತ್ತೋ

ಅಷ್ಟೇ . ನೆನ್ನೆ ಇದ್ದುದು ಇಂದು ಇಲ್ಲ , ಇಂದು ಇರುವುದು ನಾಳಿಗಿಲ್ಲ . ಅದು ಹಾಗೆಯೇ ಅಲ್ಲವೇ ? ಯಾವುದೂ ಸ್ಥಿರವಲ್ಲ . ಬಹಳ ವರ್ಷಗಳಿಂದ ವ್ಯವಹಾರವನ್ನು ತೂಗಿಸಿಕೊಂಡು ಬಂದಿದ್ದೇನೆ . ಅದನ್ನು ಮುಚ್ಚಲು ಮನಸ್ಸು ಬಾರದೆ , ಹಾಗೇ ನಡೆಸಿಕೊಂಡು ಬರುತ್ತಿದ್ದೇನೆ . ಅದರಿಂದಲೇ ಅಲ್ಲವೇ ಇಷ್ಟು ದೊಡ್ಡ ಮನೆ ಬೆಳೆದಿದ್ದು . ಆದರೆ ಅದನ್ನು ಅನುಭೋಗಿಸಲು ವಂಶ ಬೆಳೆಯಲಿಲ್ಲ . ಅದೇ ಕಾರಣಕ್ಕೆ ಸುಶೀಲಾಳ ಮನ ಮುದುರಿದ್ದು . ಅದೇ ಚಿಂತೆಯಲ್ಲಿ, ಯೌವನದಲ್ಲೂ ಮುಪ್ಪಡರಿಸಿಕೊಂಡಿದ್ದಳು ದೇಹಕ್ಕೂ , ಮನಸ್ಸಿಗೂ . ಚಿಂತೆ ಬೆಳೆದಂತೆಲ್ಲಾ ಹಾಸಿಗೆ ಹಿಡಿದಿದ್ದಳು . ಸಾಯಬಾರದ ವಯಸ್ಸಿನಲ್ಲಿ , ನನ್ನ ಒಬ್ಬಂಟಿಯಾಗಿ ಮಾಡಿ ಹೋದಳು .

ಹಾಗಾಗ ಬಾರದಿತ್ತು ರಾಯರೆ . ಆದರೆ ವಿಧಿ ಬರಹವನ್ನು ತಪ್ಪಿಸುವವರು ಯಾರು ? ಸಮಾಧಾನ ಮಾಡಿಕೊಳ್ಳಿ .

ರಾಜಣ್ಣಾ...; ಅವಳೇನೊ ಮುತ್ತೈದೆಯಾಗಿ ಹೋಗುತ್ತೇನೆಂದು ಪದೇ ಪದೇ ಹೇಳುತ್ತಾ , ಅವಳ ದಾರಿ ಅವಳು ಕಂಡುಕೊಂಡಳು . ಆದರೆ ನಾನು....?

ನನ್ನ ಅಣ್ಣನ ಮಕ್ಕಳಲ್ಲಿ ಒಬ್ಬನನ್ನು ಮಗನನ್ನಾಗಿಸಿ ಕೊಳ್ಳೋಣವೆಂದರೆ ಅವೆಲ್ಲವೂ ರಾಜಕಾರಣವನ್ನು ಅಪ್ಪಿಕೊಂಡಿದ್ದಾರೆ ಅದು ನನಗೆ ಇಷ್ಟವಿಲ್ಲದ್ದು . ಇನ್ನು ತಮ್ಮನ ಮಕ್ಕಳಲ್ಲಿ ಒಬ್ಬನನ್ನು ದತ್ತು ತೆಗೆದುಕೊಳ್ಳೋಣವೆಂದರೆ ಅವರದ್ದು ಪುಂಡು ಪೋಕರಿಗಳ ಕೆಲಸ . ಅದೂ ಹಿಡಿಸದ್ದು . ಅನಾಥಾಶ್ರಮದಿಂದ ಯಾವುದಾದರೂ ಮಗುವನ್ನು ತರೋಣವೆಂದರೆ ಅದಕ್ಕೆ ಇವರೆಲ್ಲರ ಅಡ್ಡಗಾಲು . ಬಂಧು ಬಳಗದವರು ಇತ್ತ ಬರಲೂ ಹೆದರುತ್ತಾರೆ ಇವರ ಉಪದ್ರವದ ದೆಸೆಯಿಂದ .

ರಾಯರೇ; ಅವರು ಮಾಡಿದ ಪಾಪ ಅವರೇ ಅನುಭವಿಸುತ್ತಾರೆ



ಬಿಡಿ . ಅಂದಹಾಗೆ ಆಚೆ ಮನೆ ಶಾಮಣ್ಣ ತುರ್ತಾಗಿ ಏತಕ್ಕೋ ಬರ ಹೇಳಿದ್ದಾನೆ , ಹೋಗಿ ಬರುತ್ತೇನೆ . ಈ ಪುಸ್ತಕದಲ್ಲಿ ವಾರದ ವಹಿವಾಟಿನ ವಿವರವಿದೆ . ನೋಡಿಕೊಳ್ಳಿ ಎಂದು ಹೇಳಿ ಹೊರಟನು .

**

ರಾಯರು ಮತ್ತೆ ಯೋಚನೆಯಲ್ಲಿ ಬಿದ್ದರು . ಈ ರಾಜಣ್ಣ ಒಬ್ಬನೇ ಅಷ್ಟು ವರ್ಷಗಳಿಂದ ನಂಬಿಕೆ ಉಳಿಸಿಕೊಂಡಿರುವುದು . ಯಾವ ಜನ್ಮದ ಮೈತ್ರಿಯೊ

ತಿಳಿಯದು . ಅವನೇ ನನಗೆ ಬಂಧು , ಬಳಗ , ಹಿತೈಷಿ ಎಲ್ಲವೂ .

ಹೌದು , ನಾಳೆಯೇ ಒಂದು ಗಟ್ಟಿ ನಿರ್ಧಾರ ತೆಗೆದು ಕೊಳ್ಳಲೇ ಬೇಕು . ಮುಂದೆ ಬರುವ ಕತ್ತಲೆಯಲ್ಲಿ ತಡವರಿಸುವುದಕ್ಕಿಂತ , ಬೆಳಕಿನಲ್ಲಿಯೆ ಕೆಲಸ ಪೂರೈಸ ಬೇಕು . ದಾಯಾದಿಗಳ ದರ್ಪಕ್ಕೆ ಮಣಿದು ವಾಹಿವಾಟನ್ನು ಅವರಿಗೆ ಬಿಟ್ಟು ಕೊಡುವ ಸಂದರ್ಭ ಬಂದರೆ ? ಅಥವಾ ನಾನು ಅಂ–ದುಕೊಂಡ ಕೆಲಸಕ್ಕೆ ಒಂದೆರೆಡು ವರ್ಷ ಬಿಟ್ಟು 'ಕೊಡುವುದಕ್ಕಿಂತ , ಮನದಿಚ್ಛೆಯಂತೆ ಕೊಟ್ಟು ಬಿಡುವುದೇ ಮೇಲು . ಮುಂದಿನದ್ದನ್ನು ಬಲ್ಲವರು ಯಾರು ? ಕಾಲ ಹೀಗೇ ಇರುತ್ತದೋ ಇಲ್ಲವೋ ? ವ್ಯಾಪಾರ ಒಂದೇ ಸಮನೆ ನಡೆಯದಿದ್ದರೆ ? ಕೊಡುವ ಸಾಮರ್ಥ್ಯ ಕುಂದಿದರೆ ?

ಆಗ ರಾಯರಿಗೆ ಶ್ರೀ ಕೆ.ಸಿ.ಶಿವಪ್ಪನವರ ಮುಕ್ತಕ ಒಂದು ನೆನಪಿಗೆ ಬಂದಿತು .

" ಬಿಟ್ಟು ಕೊಡುವುದಕ್ಕಿಂತ ಕೊಟ್ಟು ಬಿಡುವುದೆ ಮೇಲು

ಇಹದೊ ಇರದೊ ಬಲುಮೆ ನಾಳೆ ಕೊಡುವುದಕೆ !

ಕರೆವ ಹಸು ಒಂದೇ ತೆರ ಹಾಲು ಕೊಡದಿರಬಹುದು

ಕರ ದಣಿವ ತನಕ ಕೊಡು – ಮುದ್ದುರಾಮ .

ಅಂತೆಯೇ ತನ್ನ ಹೆಂಡತಿಯ ಇಚ್ಛೆಯಂತೆ ರಾಯರು , ಅನಾಥಾಶ್ರಮಕ್ಕೆ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ದಾನ ಕೊಟ್ಟರು , ಅದು ಅಡಿಕೆ ಮಂಡಿಯನ್ನು ಮಾರಿ ಬಂದ ಹಣದಿಂದ . ಮಂಡಿ ಮಾರಲು ಇಚ್ಛೆ ಇರಲಿಲ್ಲವಾದರೂ ಕುತಂತ್ರಿಗಳ ಪಾಲಾಗಬಾರದೆಂದು.

ತಾನಿರುವವರೆಗೂ ಮನೆ ತನ್ನದು , ನಂತರ ಅದು ರಾಜಣ್ಣಗೆ ಎಂದು ಉಯಿಲು ಬರೆಸಿಬಿಟ್ಟರು . ರಾಜಣ್ಣನ ಮುಂದಿನ ಜೀವನೋಪಾಯಕ್ಕೆಂದು ಕೈ ತುಂಬಾ ಹಣವನ್ನೂ.

---

# ಕತ್ತೆಗಳು ಮತ್ತು ಕುದುರೆ

**ಉದಯರಶ್ಮಿ ನ್ಯೂಸ್**



ಅಡವಿಯೊಂದರಲ್ಲಿ ಏಕಾಕಿ ಕುದುರೆಯೊಂದು ಮೇಯುತಿತ್ತು. ಅಲ್ಲಿಗೆ ಕತ್ತೆಗಳ ಒಂದು ಗುಂಪು ಬಂತು. ಕುದುರೆಗೂ ಅವನ್ನು ಕಂಡು ತೀರ ಕೋಪ, ತಿರಸ್ಕಾರ.

"ಹೊಲಸು ಪ್ರಾಣಿಗಳು, ಮೂರ್ಖರು. ನನ್ನಂಥ ಕುಲೀನನಾದ ಕುದುರೆ ನಿಮ್ಮ ಜತೆಯಲ್ಲಿ ಬರುವುದೆಂದರೆ ನನಗೇ ಅವಮಾನಕರ. ಒಂದೋ, ನೀವು ಇಲ್ಲಿಂದ ದೂರ ಸರಿಯಿರಿ. ಇಲ್ಲ. ನಾನೇ ಹೊರಟುಹೋಗುತ್ತೇನೆ" ಎಂದಿತು.

ಕತೆಗಳು


ಮೌನವಾಗಿ ಮೇಯುವುದನ್ನು ಮುಂದುವರಿಸಿದುವು. ಅಷ್ಟರಲ್ಲಿ ಕುದುರೆಗಳನ್ನು ಹಿಡಿಯಲೆಂದು ಬೇಟೆಗಾರರ ಒಂದು ಗುಂಪು ಅಲ್ಲಿಗೆ ಬಂತು. ಅದನ್ನು ನೋಡಿ ಕುದುರೆ ಕತ್ತೆಗಳ ಗುಂಪಿನಲ್ಲಿ ಮರೆಯಾಯಿತು. ಬೇಟೆಗಾರರು ಕತ್ತೆಗಳ ಗುಂಪನ್ನು ಗಮನಿಸಿ ಮುಂದುವರಿದರು. ಕುದುರೆ "ಬದುಕಿದೆಯಾ ಬಡಜೀವವೇ !' ಎಂದು ಸಮಾಧಾನದ ಉಸಿರುಬಿಟ್ಟಿತು.

ಇತ್ತ ಮನುಷ್ಯರನ್ನು ಕಂಡು ಕತ್ತೆಗಳಿಗೂ ಭಯವಾಗಿತ್ತು. ಅಂತಲೇ ಅವು ಕುದುರೆಗೆ "ಆದಷ್ಟು ಬೇಗ ಈ

ಅಪಾಯಕಾರಿ ಸ್ಥಳವನ್ನು ಬಿಡೋಣ. ನೀನು ದಯಮಾಡಿ ನಮ್ಮ ಜೊತೆಗೆ ಬರಲಾರೆಯಾ? ನಮಗೆ ಬೇಟೆಗಾರರನ್ನು ಕಂಡರೆ ಭಯವಾಗುತ್ತದೆ," ಎಂದುವು.

ಆದರೆ ಅಪಾಯ ದೂರವಾದಮೇಲೆ ಕುದುರೆಯ ಪ್ರತಿಷ್ಠೆಯ ಪ್ರಜ್ಞೆ ಮತ್ತೆ ಜಾಗೃತವಾಯಿತು.

"ಛೇ.... ನೀವೆಲ್ಲ ಹೇಸಿ



## ವಿದ್ಯಾರ್ಥಿನಿಧಿ

– ಮಂಡ್ಯ.ಮ.ನಾ.ಉಡುಪ

ಪ್ರಾಣಿಗಳು. ನಿಮ್ಮೊಟ್ಟಿಗೆ ನಡೆದರೆ ನನ್ನ ಕುಲದ ಮರ್ಯಾದೆಯೆಲ್ಲಿ ಉಳಿದೀತು?" ಎಂದಿದ್ದೇ ಬೇರೆ ದಾರಿ ಹಿಡಿಯಿತು.

ಕತ್ತೆಗಳು ಆ ಸ್ಥಳದಿಂದ ಲಗುಬಗೆಯಿಂದ ಓಟಕಿತ್ತವು. ಸ್ವಲ್ಪ ದೂರ ಹೋಗಿ ಮರಳಿ ಬರುತ್ತಿದ್ದ ಬೇಟೆಗಾರರಿಗೆ ಒಂಟಿಯಾಗಿ ತಿರುಗುತ್ತಿದ್ದ ಕುದುರೆ ಕಾಣಿಸಿತು. ಅವರು ಕೂಡಲೆ ಬಲೆಬೀಸಿ ಅದನ್ನು ಹಿಡಿದುಕೊಂಡು ಹೋದರು.

ದೀನರ ಸಹವಾಸವೂ ಕೆಲವೊಮ್ಮೆ ಉಪಕಾರಿಯಾಗುತ್ತದೆ ಎಂಬುದನ್ನು ಕುದುರೆ ಮರೆತದ್ದು ಸರಿಯೆ?